ಮಾನಸಿ

ತಿಂಗಳ ಪತ್ರಿಕೆ ಜೂನ್ : 1996



- ವಿಚಯ ಒಂದು ಅನಿಸಿಕೆ
- ಸಾಹಿತ್ಯ ಹಾಗೂ ಬದುಕು ಪರಸ್ಪರ ಬದ್ಧವಾಗಿರಬೇಕು
- ಮಹಾಶ್ವೇತಾ ದೇವಿಯವರ 'ದೋಪ್ಪಿ' ಹಾಗೂ ಇತರ ಕಥೆಗಳು
- ಭಾರತದ ಮಹಿಳೆಯರ ಸ್ಥಾನ/ಮಾನ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 11 ಸಂಚಿಕೆ : 5
ಜೂನ್ : 1996

ವಿಳಾಸ :
"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067

ಸೂಚನೆ :	ಬಿಡಿ ಪ್ರತಿ	3-00 ರೂ.
	ವಾರ್ಷಿಕ ಚಂದಾ	25-00 ರೂ.
	ಆಜೀವ ಚಂದಾ	300-00 ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ....

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭



ಸಂಪಾದಕೀಯ

ಸ್ತ್ರೀವಾದ ಎತ್ತುವ ಪ್ರಶ್ನೆಗಳು ಮೂಲಭೂತವಾಗಿ ಸ್ತ್ರೀ-ಪುರುಷರ ಹಾಗೂ ಬಂಡವಾಳಶಾಹಿ ಜಗತ್ತಿನ ಮೌಲ್ಯಗಳಿಗೆ ಸವಾಲೆಸೆಯುವಂತಹವುಗಳಾಗಿರುತ್ತವೆ. ಹಾಗಾಗಿ ಸ್ತ್ರೀವಾದದ ವಿಷನ್ ಬಗ್ಗೆ ಮಾತನಾಡುವಾಗ ಬಹು ಮಂದಿ ತಮ್ಮ ಮೂಲಭೂತ ಸವಲತ್ತುಗಳಿಗೆ ಧಕ್ಕೆ ಬರದಂತಹ ಸಾಂಪ್ರದಾಯಿಕ ಸ್ತ್ರೀತ್ವದ ಮಾದರಿಗಳನ್ನು ನಮ್ಮ ಮುಂದೆ ಇಡುವುದನ್ನು ನಾವು ಕಾಣಬಹುದು. ಏಕೆಂದರೆ ಈ ಮಾದರಿಗಳು ನಿರಪಾಯಕಾರಿಯಾಗಿರುತ್ತವೆ. ಹಾಗಾಗಿ ಈಗಿರುವ ಸಾಮಾಜಿಕ ಮೌಲ್ಯಗಳಲ್ಲಿ ಅಡಗಿದ ಸವಲತ್ತುಗಳಿಗೆ ಧಕ್ಕೆಯಾಗುವ ಭಯ ಇರುವುದಿಲ್ಲ.

ಸ್ತ್ರೀವಾದದ ಪ್ರಶ್ನೆಗಳು ಕುಟುಂಬದೊಳಗಿನ ಪಾತ್ರಗಳು ಬೇರೆಯಾಗಿ ಅರ್ಥೈಸಲ್ಪಡಬೇಕು, ರಚನೆಗಳು ಬೇರೆಯಾಗಿರಬೇಕು ಎಂಬ ಒತ್ತಡವನ್ನು ಹೇರುತ್ತವೆ. ಕುಟುಂಬಕ್ಕೆ ಸವಾಲಾಗುವ ಪ್ರಶ್ನೆಗಳು ಸಮಾಜಕ್ಕೆ ಎದುರಾಗುತ್ತವೆ. ಸಮಾಜದ ಅತ್ಯಂತ ಪ್ರಮುಖ ಘಟಕವಾದ ಕುಟುಂಬದ ಚೌಕಟ್ಟಿನೊಳಗೆ ಹೆಣ್ಣಿನ ಮೇಲೆ 'ಖಾಸಗಿ'ಯಾಗಿ ನಡೆಯುವ ದೌರ್ಜನ್ಯಕ್ಕೆ ನವಿರಾದ, ಸೊಗಸಾದ, ನಯವಾದ ರೂಪಗಳಿವೆ, ಸಾಮಾಜಿಕ ಒಪ್ಪಂದವಿದೆ. ಈ 'ಖಾಸಗಿ' ಬದುಕಿಗೆ ಧಕ್ಕೆಯಾಗದಂತಹ ಸ್ತ್ರೀತ್ವದ ಮಾದರಿಗಳನ್ನು ನಮ್ಮ ಮುಂದೆ ಇಟ್ಟಾಗ ನಾವು ಜಾಗರೂಕರಾಗಿರಬೇಕಾಗುತ್ತದೆ.

ಕೌಟುಂಬಿಕ ಬದುಕು ತ್ಯಜಿಸಿ ಚೆನ್ನಮಲ್ಲಿಕಾರ್ಜುನನಲ್ಲಿ ಒಂದಾಗ ಬಯಸಿದ್ದ ಅಕ್ಕಮಹಾದೇವಿಯ ಸ್ತ್ರೀತ್ವದ ಪ್ರತೀಕ ಆ ಮಟ್ಟಿಗೆ ನಮ್ಮೆಲ್ಲರಿಗೂ ಆತ್ಮೀಯವಾದ ಪ್ರತೀಕವೇ. ಆದರೆ ಇಂದಿನ ಮಹಿಳೆಯರ ಸಂಕೀರ್ಣ ಸಮಸ್ಯೆಗಳಿಗೆ ಈ ಮಾದರಿಗಳು ಉತ್ತರವಲ್ಲ. ಕೌಟುಂಬಿಕ ಚೌಕಟ್ಟಿಗೆ ಸವಾಲೆಸೆದೂ ಕೂಡಾ ಹೆಣ್ಣುತನವನ್ನು 'ನರಕಹೇತು' ಎಂದು ನಂಬಿದ ಅಕ್ಕನ ಮಾದರಿ ಇಂದಿನ ಹೆಣ್ಣಿನ ಸಂಕೀರ್ಣ ಸಮಸ್ಯೆಗೆ ಉತ್ತರವಲ್ಲ.

ಕೆಲವಾರು ತಿಂಗಳುಗಳ ಹಿಂದೆ ಸ್ತ್ರೀವಾದಕ್ಕೆ ಸಂಬಂಧಪಟ್ಟಂತೆ ತುಮಕೂರಿನಲ್ಲಿ ಒಂದು ಪುಟ್ಟ ಸಭೆ ನಡೆಯಿತು. ಇದರಲ್ಲಿ ಆಶಯ ಭಾಷಣದ ಅಧ್ಯಕ್ಷತೆ ವಹಿಸಿದ್ದ ದಲಿತ ಲೇಖಕ ಸಿದ್ಧಯ್ಯ ಭಾರತೀಯ ಸ್ತ್ರೀವಾದಕ್ಕೆ ಅಕ್ಕನ ಸ್ತ್ರೀತ್ವದ ಮಾದರಿಯ ಅಗತ್ಯ ಕುರಿತು ಮಾತನಾಡುತ್ತಾ ಅಂಗ/ಅನಂಗ ಪ್ರಜ್ಞೆ ಕುರಿತು ಹೇಳಿದರು. ಇಂದು ಭಾರತೀಯ ಸ್ತ್ರೀವಾದ ಅನಂಗ ಪ್ರಜ್ಞೆ ಬೆಳೆಸಿಕೊಂಡು ಮುಂದುವರೆಯಬೇಕಾಗಿದೆ ಎಂದು ಹೇಳಿದುದು ಹಲವಾರು ಸ್ತ್ರೀವಾದಿಗಳಲ್ಲಿ ಕೋಪ, ಮುಜುಗರ ಉಂಟುಮಾಡಿತ್ತು. ಇಂದಿನ ಸ್ತ್ರೀಯ ಎಲ್ಲಾ ಸಮಸ್ಯೆಗಳ ಮೂಲ ಅಂಗ ಪ್ರಜ್ಞೆಯೇ ಆಗಿರುವಾಗ ಅನಂಗ ಪ್ರಜ್ಞೆ, ಅಥವಾ ಲೌಕಿಕ ಮೀರಿದ ಅಲೌಕಿಕತೆಯ ಕಡೆ ಚಳುವಳಿ ಬೆಳೆಯಬೇಕಾಗಿದೆ ಎಂಬುದರ ಔಚಿತ್ಯವನ್ನು ಹಲವಾರು ಸ್ತ್ರೀವಾದಿಗಳು ಪ್ರಶ್ನಿಸಿದರು. ಇಂತಹ ಮಾದರಿಯನ್ನು ಎತ್ತಿ ಹಿಡಿಯುವ ಮೂಲಕ, ಅದೇ ಮಹಿಳಾ ಚಳುವಳಿಯ ವಿಷನ್ ಆಗಿರಬೇಕೆಂಬುದರ ಮೂಲಕ ಸ್ತ್ರೀವಾದದ ಸವಾಲುಗಳನ್ನು ಸರಳೀಕರಿಸುವುದರ ಬಗ್ಗೆ ನಾವು ಜಾಗರೂಕರಾಗಿರಬೇಕಾಗುತ್ತದೆ.

- ಸಂಪಾದಕೀಯ ಮಂಡಳಿ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 11 ಸಂಚಿಕೆ : 5

ಜೂನ್ : 1996

ವಿಳಾಸ :

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ :	ಬಿಡಿ ಪ್ರತಿ	3-00 ರೂ.
	ವಾರ್ಷಿಕ ಚಂದಾ	25-00 ರೂ.
	ಆಜೀವ ಚಂದಾ	300-00 ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ....

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭



ಸಂಪಾದಕೀಯ

ಸ್ತ್ರೀವಾದ ಎತ್ತುವ ಪ್ರಶ್ನೆಗಳು ಮೂಲಭೂತವಾಗಿ ಸ್ತ್ರೀ-ಪುರುಷರ ಹಾಗೂ ಬಂಡವಾಳಶಾಹಿ ಜಗತ್ತಿನ ಮೌಲ್ಯಗಳಿಗೆ ಸವಾಲೆಸೆಯುವಂತಹವುಗಳಾಗಿರುತ್ತವೆ. ಹಾಗಾಗಿ ಸ್ತ್ರೀವಾದದ ವಿಷನ್ ಬಗ್ಗೆ ಮಾತನಾಡುವಾಗ ಬಹು ಮಂದಿ ತಮ್ಮ ಮೂಲಭೂತ ಸವಲತ್ತುಗಳಿಗೆ ಧಕ್ಕೆ ಬರದಂತಹ ಸಾಂಪ್ರದಾಯಕ ಸ್ತ್ರೀತ್ವದ ಮಾದರಿಗಳನ್ನು ನಮ್ಮ ಮುಂದೆ ಇಡುವುದನ್ನು ನಾವು ಕಾಣಬಹುದು. ಏಕೆಂದರೆ ಈ ಮಾದರಿಗಳು ನಿರಪಾಯಕಾರಿಯಾಗಿರುತ್ತವೆ. ಹಾಗಾಗಿ ಈಗಿರುವ ಸಾಮಾಜಿಕ ಮೌಲ್ಯಗಳಲ್ಲಿ ಅಡಗಿದ ಸವಲತ್ತುಗಳಿಗೆ ಧಕ್ಕೆಯಾಗುವ ಭಯ ಇರುವುದಿಲ್ಲ.

ಸ್ತ್ರೀವಾದದ ಪ್ರಶ್ನೆಗಳು ಕುಟುಂಬದೊಳಗಿನ ಪಾತ್ರಗಳು ಬೇರೆಯಾಗಿ ಅರ್ಥೈಸಲ್ಪಡಬೇಕು, ರಚನೆಗಳು ಬೇರೆಯಾಗಿರಬೇಕು ಎಂಬ ಒತ್ತಡವನ್ನು ಹೇರುತ್ತವೆ. ಕುಟುಂಬಕ್ಕೆ ಸವಾಲಾಗುವ ಪ್ರಶ್ನೆಗಳು ಸಮಾಜಕ್ಕೆ ಎದುರಾಗುತ್ತವೆ. ಸಮಾಜದ ಅತ್ಯಂತ ಪ್ರಮುಖ ಘಟಕವಾದ ಕುಟುಂಬದ ಚೌಕಟ್ಟಿನೊಳಗೆ ಹೆಣ್ಣಿನ ಮೇಲೆ 'ಖಾಸಗಿ'ಯಾಗಿ ನಡೆಯುವ ದೌರ್ಜನ್ಯಕ್ಕೆ ನವಿರಾದ, ಸೊಗಸಾದ, ನಯವಾದ ರೂಪಗಳಿವೆ, ಸಾಮಾಜಿಕ ಒಪ್ಪಂದವಿದೆ. ಈ 'ಖಾಸಗಿ' ಬದುಕಿಗೆ ಧಕ್ಕೆಯಾಗದಂತಹ ಸ್ತ್ರೀತ್ವದ ಮಾದರಿಗಳನ್ನು ನಮ್ಮ ಮುಂದೆ ಇಟ್ಟಾಗ ನಾವು ಜಾಗರೂಕರಾಗಿರಬೇಕಾಗುತ್ತದೆ.

ಕೌಟುಂಬಿಕ ಬದುಕು ತ್ಯಜಿಸಿ ಚನ್ನಮಲ್ಲಿಕಾರ್ಜುನನಲ್ಲಿ ಒಂದಾಗ ಬಯಸಿದ್ದ ಅಕ್ಕಮಹಾದೇವಿಯ ಸ್ತ್ರೀತ್ವದ ಪ್ರತೀಕ ಆ ಮಟ್ಟಿಗೆ ನಮ್ಮೆಲ್ಲರಿಗೂ ಆತ್ಮೀಯವಾದ ಪ್ರತೀಕವೇ. ಆದರೆ ಇಂದಿನ ಮಹಿಳೆಯರ ಸಂಕೀರ್ಣ ಸಮಸ್ಯೆಗಳಿಗೆ ಈ ಮಾದರಿಗಳು ಉತ್ತರವಲ್ಲ. ಕೌಟುಂಬಿಕ ಚೌಕಟ್ಟಿಗೆ ಸವಾಲೆಸೆದೂ ಕೂಡಾ ಹೆಣ್ಣುತನವನ್ನು 'ನರಕಹೇತು' ಎಂದು ನಂಬಿದ ಅಕ್ಕನ ಮಾದರಿ ಇಂದಿನ ಹೆಣ್ಣಿನ ಸಂಕೀರ್ಣ ಸಮಸ್ಯೆಗೆ ಉತ್ತರವಲ್ಲ.

ಕೆಲವಾರು ತಿಂಗಳುಗಳ ಹಿಂದೆ ಸ್ತ್ರೀವಾದಕ್ಕೆ ಸಂಬಂಧಪಟ್ಟಂತೆ ತುಮಕೂರಿನಲ್ಲಿ ಒಂದು ಪುಟ್ಟ ಸಭೆ ನಡೆಯಿತು. ಇದರಲ್ಲಿ ಆಶಯ ಭಾಷಣದ ಅಧ್ಯಕ್ಷತೆ ವಹಿಸಿದ್ದ ದಲಿತ ಲೇಖಕ ಸಿದ್ಧಯ್ಯ ಭಾರತೀಯ ಸ್ತ್ರೀವಾದಕ್ಕೆ ಅಕ್ಕನ ಸ್ತ್ರೀತ್ವದ ಮಾದರಿಯ ಅಗತ್ಯ ಕುರಿತು ಮಾತನಾಡುತ್ತಾ ಅಂಗ/ಅನಂಗ ಪ್ರಜ್ಞೆ ಕುರಿತು ಹೇಳಿದರು. ಇಂದು ಭಾರತೀಯ ಸ್ತ್ರೀವಾದ ಅನಂಗ ಪ್ರಜ್ಞೆ ಬೆಳೆಸಿಕೊಂಡು ಮುಂದುವರೆಯಬೇಕಾಗಿದೆ ಎಂದು ಹೇಳಿದುದು ಹಲವಾರು ಸ್ತ್ರೀವಾದಿಗಳಲ್ಲಿ ಕೋಪ, ಮುಜುಗರ ಉಂಟುಮಾಡಿತ್ತು. ಇಂದಿನ ಸ್ತ್ರೀಯ ಎಲ್ಲಾ ಸಮಸ್ಯೆಗಳ ಮೂಲ ಅಂಗ ಪ್ರಜ್ಞೆಯೇ ಆಗಿರುವಾಗ ಅನಂಗ ಪ್ರಜ್ಞೆ ಅಥವಾ ಲೌಕಿಕ ಮೀರಿದ ಅಲೌಕಿಕತೆಯ ಕಡೆ ಚಳುವಳಿ ಬೆಳೆಯಬೇಕಾಗಿದೆ ಎಂಬುದರ ಔಚಿತ್ಯವನ್ನು ಹಲವಾರು ಸ್ತ್ರೀವಾದಿಗಳು ಪ್ರಶ್ನಿಸಿದರು. ಇಂತಹ ಮಾದರಿಯನ್ನು ಎತ್ತಿ ಹಿಡಿಯುವ ಮೂಲಕ, ಅದೇ ಮಹಿಳಾ ಚಳುವಳಿಯ ವಿಷನ್ ಆಗಿರಬೇಕೆಂಬುದರ ಮೂಲಕ ಸ್ತ್ರೀವಾದದ ಸವಾಲುಗಳನ್ನು ಸರಳೀಕರಿಸುವುದರ ಬಗ್ಗೆ ನಾವು ಜಾಗರೂಕರಾಗಿರಬೇಕಾಗುತ್ತದೆ.

- ಸಂಪಾದಕೀಯ ಮಂಡಳಿ

ಡಾ. ಸುಮಿತ್ರಾಬಾಯಿಯವರ

'ವಿಚಯ' : ಒಂದು ಅನ್ನಿಸಿಕೆ

ಚಂಪಾವತಿ ಎಚ್. ಎಸ್.

ಈ ಸಂಕಲನದ ಅನೇಕ ಲೇಖನಗಳನ್ನು ಬಿಡಿ ಬಿಡಿಯಾಗಿ ಓದಿದ್ದ ನನಗೆ ಒಟ್ಟಾರೆಯಾಗಿ ಓದಿದಾಗ - ಸ್ತ್ರೀವಾದಿ ಸಾಹಿತ್ಯದ ಒಳನೋಟದ ದೃಷ್ಟಿಯಿಂದ ಚಾರಿತ್ರಿಕವಾಗಿ ಈ ಕೃತಿ ಬಹಳ ಮಹತ್ವವಾದುದು ಎನಿಸುತ್ತದೆ. ನಿಕರಾಗುವ ಅರ್ನೆಸ್ಟೋ ಕಾರ್ಡೆನಲ್ ಡಚ್ ವಾರಪತ್ರಿಕೆಯೊಂದರಲ್ಲಿ ಹೀಗೆ ಬರೆಯುತ್ತಾರೆ : "If we were to provide people with food and medicine only, we would be treating them like animals. Food is important; health is important but both are meaningless if we can not live as people, as human being". ಈ ಮಾತು ಸಂಸ್ಕೃತಿ ಬದುಕಿಗೆ ಎಷ್ಟು ಅಗತ್ಯ ಎಂಬ ಮಾತನ್ನು ಸ್ಪಷ್ಟಪಡಿಸುತ್ತದೆ. ಈ ಸಂಸ್ಕೃತಿಯ ನಿರ್ವಹಣೆ ಅತ್ಯಂತ ಜವಾಬ್ದಾರಿಯ ಕೆಲಸ. ಈ ಜವಾಬ್ದಾರಿಯ ಅರಿವುಗಳು ಈ ವಿಮರ್ಶಾ ಸಂಕಲನದಲ್ಲಿ ಕಂಡು ಬರುವುದರಿಂದ ಇದು ಚಾರಿತ್ರಿಕವಾಗಿ ಮುಖ್ಯ ಸಂಕಲನವಾಗುತ್ತದೆ ಎಂದು ನನ್ನ ಅನಿಸಿಕೆ. "ಸ್ವಂತದ ಚಿಂತನೆ, ಬರಹಗಳ ಹಾದಿಯಲ್ಲೂ ಸ್ತ್ರೀವಾದಿ ಅಧ್ಯಯನದ ಒಂದು ಯತ್ನವಾಗಿಯೂ ಈ ಸಂಕಲನವು ಒಂದು 'ವಿಶೇಷವಾದ ಹುಡುಕಾಟ' ಆಗಲೆಂಬ ಅಭೀಪ್ಸೆ ಇದರ ಹಿಂದಿದೆ" ಎಂಬ ವಿಮರ್ಶಕಿಯ ಅಭಿಲಾಷೆಯನ್ನು ಈ ಸಂಕಲನವು ಬಹುಮಟ್ಟಿಗೆ ಯಶಸ್ವಿಗೊಳಿಸುತ್ತದೆ.

ಈ ವಿಮರ್ಶಾ ಸಂಕಲನ ಚಾರಿತ್ರಿಕವಾಗಿ ಮುಖ್ಯವಾಗಿದೆ ಎನ್ನುವುದಕ್ಕೆ ಹಲವಾರು ಕಾರಣಗಳನ್ನು ಮುಂದಿಡಬಹುದಾಗಿದೆ.

೧. ಮಹಿಳಾ ಬರಹಗಾರ್ತಿಯರನ್ನು ಹಾಗೂ ಇತರ ಬರಹಗಳನ್ನು ಅಭ್ಯಸಿಸುವಲ್ಲಿ ಇರುವ ರಾಜಕೀಯ/ಸಾಮಾಜಿಕ ದೃಷ್ಟಿಕೋನದ ನೋಟ ರೂಪಿಸಿರುವ ತಾತ್ವಿಕತೆ.

೨. ಸ್ತ್ರೀವಾದಿ ಬದ್ಧತೆಯಿಂದ ಹೊರಡುವ ಸಾಹಿತ್ಯ ವಿಮರ್ಶಾ ಗ್ರಹಿಕೆಗಳಲ್ಲಿ ಹೊರಹೊಮ್ಮುವ ಸ್ತ್ರೀವಾದಿ ಜೀವನದ ದೃಷ್ಟಿಕೋನ.

೩. ಚಾರಿತ್ರಿಕವಾಗಿ ಮಹಿಳಾ ಸಾಹಿತಿಗಳ - ಸ್ತ್ರೀವಾದಿ ಸಾಹಿತ್ಯ ಚರಿತ್ರೆಯನ್ನು ಕ್ರಮಬದ್ಧವಾಗಿ ಅಭ್ಯಸಿಸಿರುವುದು

೪. ಮಹಿಳಾ ಸಾಹಿತ್ಯದ ವಿಮರ್ಶೆಯ ಜೊತೆ ಜೊತೆಗೆಯೇ ಸಾಹಿತ್ಯದ ಆಶಯಗಳನ್ನು ಬಿಂಬಿಸಲು ಯತ್ನಿಸಿರುವುದು.

ಈ ನಾಲ್ಕೂ ಅಂಶಗಳೂ ವಿಮರ್ಶೆಯಲ್ಲಿ ಒಂದಕ್ಕೊಂದು ತಳಕು ಹಾಕಿಕೊಂಡು ಒಡಮೂಡಿರುವುದರಿಂದ ಇವುಗಳನ್ನಿಲ್ಲಿ ಭಿನ್ನ ಭಿನ್ನವಾಗಿ ಚರ್ಚಿಸದೇ ಒಟ್ಟಾರೆಯಾಗಿ ನನ್ನ ಅನ್ನಿಸಿಕೆಗಳನ್ನು ಬರೆಯಲು ಪ್ರಯತ್ನಿಸಿದ್ದೇನೆ.

'ವಿಚಯ'-ದ ಮೊದಲನೇ ಭಾಗ ಪ್ರಸ್ತುತದಲ್ಲಿ ಸ್ತ್ರೀವಾದಿ ಸಾಹಿತ್ಯದ ಬಗ್ಗೆ ಇರುವ ಎಲ್ಲಾ ವಾದಗಳನ್ನೂ ಗಮನಿಸುತ್ತದೆ. 'ಮಹಿಳೆ ಮತ್ತು ಸೃಜನಶೀಲ ಸಾಹಿತ್ಯ'ದಲ್ಲಿ ಲೇಖಕಿಯರಿಗಿರುವ ಆತಂಕ ಹಾಗೂ ಮಿತಿಗಳೆರಡನ್ನೂ ಚರ್ಚಿಸುತ್ತದೆ. ಮಹಿಳೆಯ ಅತ್ಯಲ್ಪ ಆಕಾಂಕ್ಷೆ, ಗಂಭೀರವಾದ ತರಬೇತಿಯ ಕೊರತೆ, ಸ್ಫೂರ್ತಿಯ ಬಗ್ಗೆಗಿನ ತಪ್ಪು ಗ್ರಹಿಕೆಗಳು, ಆತ್ಮರತಿ/ಕೀಳರಿಮೆ, ಆಸ್ಫೋಟಿಸಲು ಇರುವ ಭಯಗಳು, ಅತಿ ಜಾಣತನದ ವಿನಯವಂತಿಕೆ, ತೋರಿಕೆಯ ಆಚೆ ಹೋಗಲಾರದಿರುವ ಮಿತಿಗಳು, ಮನುಷ್ಯನ ಪರಿಸ್ಥಿತಿಗಳೊಂದಿಗೆ ಸ್ಪರ್ಧಿಸಲಾಗದ ದುರಂತ, ಸಂಸ್ಕೃತಿಯನ್ನು ಮೀರಿ ಸ್ವತಂತ್ರ ಪ್ರಕ್ರಿಯೆಯ ಮೂಲಕ ಅದನ್ನು ಗ್ರಹಿಸಲು ಪ್ರಯತ್ನ ಪಡದಿರುವಿಕೆ, ವಿಶ್ವದರ್ಶನದ ಕೊರತೆ ಇಂತಹ ಮುಖ್ಯವಾದ ಅಂಶಗಳ ಮೇಲೆ ಬೆಳಕು ಚಲ್ಲಿ ಲೇಖಕಿಯರ ಸೃಜನಶೀಲತೆಯಲ್ಲಿನ ಕೊರತೆಯನ್ನು ಗಮನಿಸುತ್ತದೆ. ಆದರೆ ಈ ಲೇಖನದಲ್ಲಿ ಮುಖ್ಯವಾಗಿ ಕೊರತೆಯೆಂದು ನನಗೆ ಕಂಡುದುದು - ಚರ್ಚೆಯ ಸಂದರ್ಭದಲ್ಲಿ ಪಾಶ್ಚಾತ್ಯ ಕೃತಿಗಳ ಹಿನ್ನೆಲೆಯಿದೆಯೇ ಹೊರತು ಕನ್ನಡದ ಕೃತಿಗಳ ಹಿನ್ನೆಲೆಯಲ್ಲಿ ಚರ್ಚಿತವಾಗಿಲ್ಲ. ಈ ಮಾತು ಈ ಲೇಖನದ ಸಂದರ್ಭಕ್ಕೆ ಮಾತ್ರ. ಆದರೆ ಇಡಿಯ ಸಂಕಲನ ಓದಿ ಮುಗಿಸಿದಾಗ ಈ ಕೊರತೆಯ ಅಂಶ ಕಾಣಿಸುವುದಿಲ್ಲ.

ಮೇಲಿನ ಅಂಶಗಳೆಲ್ಲ ಕನ್ನಡದ ಸಂದರ್ಭದಲ್ಲಿ ಚರ್ಚಿತವಾಗಿದ್ದರೆ ಇನ್ನೂ ಹೆಚ್ಚು ಉಪಯುಕ್ತವಾಗುತ್ತಿತ್ತೆಂಬ ಅನಿಸಿಕೆ ಮೊದಲನೆಯ ಲೇಖನ ಓದಿದಾಗ ಒಡಮೂಡುತ್ತದೆ.

ಇದೇ ಲೇಖನದಲ್ಲಿ ಮಹಿಳೆಯರ ಮಿತಿಗಳ ಬಗ್ಗೆ ಮಾತನಾಡುತ್ತಾ ವಿಮರ್ಶಕಿ ಈ ಮಾತು ಹೇಳುತ್ತಾರೆ, "ಮಹಿಳೆ ತನಗೆ ದತ್ತವಾಗಿ ಬಂದ ಜಗತ್ತಿನ ಜೊತೆ ಸಂಕಟದೊಂದಿಗೆ, ಆಪ್ತ ಸಂಭಾಷಣೆ ನಡೆಸುವುದು ಕಡಿಮೆ. ಅವಳನ್ನು ಸುತ್ತುವರೆದಿರುವ ನಿರ್ಬಂಧಗಳು, ಅವಳನ್ನು ಕೆಳಕ್ಕೇ ಜಗ್ಗುವ ಸಂಪ್ರದಾಯದ ಭಾರ ಎಲ್ಲವೂ ಈ ಜಗತ್ತಿಗೆ ತಾನು ಹೊಣೆಗಾರಳು ಎಂಬ ಭಾವನೆಯೇ ಆಕೆಗೆ ಬಾರದಂತೆ ಮಾಡುತ್ತವೆ. ನಾವು ಮಹಾತ್ಮರು ಎಂದು ಗುರುತಿಸುವ ವ್ಯಕ್ತಿಗಳೆಲ್ಲಾ ಒಂದಲ್ಲ ಒಂದು ವಿಧವಾಗಿ ಜಗತ್ತಿನ ಹೊರೆಯನ್ನು ತಮ್ಮ ಹೆಗಲಿಗೆ ಹೊತ್ತವರು. ಅವರು ಮಾಡಿದ ಕೆಲಸ ಚೆನ್ನಿರಬಹುದು. ಇಲ್ಲದಿರಬಹುದು. ಆದರೆ ಲೋಕವನ್ನು ಮತ್ತೆ ನಿರ್ಮಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಇಲ್ಲವೆ ನಾಶವಾಗಿದ್ದಾರೆ. ಇದು ಯಾವೊಬ್ಬ ಹೆಂಗಸರೂ ಎಂದೂ ಮಾಡಿಲ್ಲದ ಕೆಲಸವಾಗಿದೆ. ವಿಶ್ವವನ್ನು 'ತನ್ನ'ದೆಂದು ತಿಳಿಯುವುದು, ಅದರ ತಪ್ಪಿಗಾಗಿ ತನ್ನನ್ನು ನಿಂದಿಸಿಕೊಳ್ಳುವುದು, ಅದರ ಪ್ರಗತಿಯಲ್ಲಿ ತನ್ನ ಸಂತೋಷ ಕಾಣುವುದು ಇವುಗಳನ್ನು ಮಾಡಬೇಕಾದಲ್ಲಿ ವ್ಯಕ್ತಿ ಅಧಿಕಾರ ವರ್ಗಕ್ಕೆ ಸೇರಿದವನಾಗಿರಬೇಕು. ಏಕೆಂದರೆ ಸನ್ನಿವೇಶವನ್ನು ಬದಲಿಸುತ್ತಾ ಅದಕ್ಕೆ ಸಮರ್ಥನೆ, ನ್ಯಾಯ ಒದಗಿಸಬಲ್ಲ, ಆ ಬಗ್ಗೆ ಚಿಂತಿಸಿ ಬೆಳಕಿಗೆ ತರಬಲ್ಲ ಸಾಮರ್ಥ್ಯವು ಸನ್ನಿವೇಶದ ಮೇಲೆ ಅಧಿಕಾರವಿದ್ದವರಿಗೆ ಮಾತ್ರ ಇರಬಲ್ಲದು, "ಮಾನವ"ನನ್ನು ಅವತರಿಸುವಂತೆ ಪುರುಷನಿಗೆ ಮಾತ್ರ ಇದುವರೆಗೆ ಸಾಧ್ಯವಾಗಿದೆ, ಸ್ತ್ರೀಗೆ ಅಲ್ಲ. ಅತಿ ದೊಡ್ಡವರೆನಿಸಿಕೊಂಡ ವ್ಯಕ್ತಿಗಳು, ಪ್ರತಿಭಾವಂತರೆಂದು ಸನ್ಮಾನಿತರಾಗುವವರು ಇಡಿಯ ಮಾನವ ಜನಾಂಗದ ವಿಧಿಯನ್ನೇ ತಮ್ಮ ವ್ಯಕ್ತಿಗತ ಬದುಕಿನಲ್ಲಿ ನಾಟ್ಯೀಕರಿಸಿ ಬದಲಿಸಲು ಯತ್ನಿಸಿದವರು. ಯಾವೊಬ್ಬ ಮಹಿಳೆಯೂ ಇದನ್ನು ಸಾಧಿಸಬಲ್ಲ ಅಧಿಕಾರ ತನಗಿದೆ ಎಂದು ಇನ್ನೂ ನಂಬಿಲ್ಲ" (ಪು. ೧೦, ೧೧).

ಇಲ್ಲಿ ವಿಮರ್ಶಕಿ ಮಾತನಾಡುತ್ತಿರುವುದು ಸನ್ನಿವೇಶದ ಮೇಲಿನ ಅಧಿಕಾರ ಕುರಿತು, 'ಮಾನವ'ನನ್ನು ಸೃಷ್ಟಿಸಲು ಬೇಕಾದ ಅಧಿಕಾರ, ಮಾನವ ಜನಾಂಗದ ಅನುಮಾನ, ಆತಂಕ ಗುರುತಿಸುವ ಅಧಿಕಾರ, ಹೆಣ್ಣು-ಗಂಡೆಂಬ ಲೈಂಗಿಕ ವಿಭಿನ್ನತೆ ಮೀರಿ ಸ್ವತಂತ್ರ್ಯ ಅಸ್ತಿತ್ವ ಕಂಡುಕೊಳ್ಳುವ ಅಧಿಕಾರ. ಹೀಗೆ 'ಅಧಿಕಾರ'ದ ಕಲ್ಪನೆಯನ್ನು ಸೃಜನಶೀಲತೆಯ ಹಿನ್ನೆಲೆಯಲ್ಲಿ ಚರ್ಚಿಸಿರುವುದು ತುಂಬಾ ಗಮನಾರ್ಹವಾದ ವಿಚಾರ. ಚಳುವಳಿಯ ಸಂದರ್ಭ ಬಂದಾಗ ಭಾರತದಲ್ಲಿ ಸ್ವಾಯತ್ತ ಮಹಿಳಾ ಗುಂಪುಗಳಲ್ಲಿ ಇಂತಹ 'ಅಧಿಕಾರ'ದ ಚರ್ಚೆ ಕಳೆದ ಎರಡು ದಶಕಗಳಲ್ಲಿ ವಿಚಾರಪೂರ್ಣವಾಗಿ ನಡೆದದ್ದಿದೆ. 'ಅಧಿಕಾರ' ಮೇಲಿನ ಅರ್ಥದಲ್ಲಿ ಮಾತ್ರವಲ್ಲ, ಇದರ ಮೌಲ್ಯಗಳು, ಗ್ರಹಿಕೆಗಳು ಭಿನ್ನ ನೆಲೆಯಲ್ಲಿ ಚರ್ಚೆಗೊಂಡು ಸ್ವೀಕೃತಗೊಳ್ಳಬೇಕಿವೆ ಎಂಬ ನಿಲುವೂ ಕೂಡಾ ಮಹಿಳಾ ಚಳುವಳಿಯಲ್ಲಿ ಕಂಡು ಬಂದದ್ದಿದೆ. ಈಗಿರುವ 'ಅಧಿಕಾರ' ಕಲ್ಪನೆಯ demystification ಆಗಬೇಕಾದ್ದದಿದೆ. Demystification of power ಎಂಬುದು ಮಹಿಳಾ ಚಳುವಳಿಗೆ ಒಂದು ತಾತ್ವಿಕ ಚೌಕಟ್ಟು ಒದಗಿಸಿಕೊಡುತ್ತಲೇ ರೂಢಿಯಲ್ಲಿರುವ 'ಅಧಿಕಾರ'ದ ಪ್ರಶ್ನೆಗೆ ಸವಾಲಾಗಿ ನಿಲ್ಲುತ್ತದೆ.

ಸಂಸ್ಕೃತಿಯ ಸಂದರ್ಭ - ಸಾಹಿತ್ಯ ಹಾಗೂ ಚಳುವಳಿಯ ಅಂತರ್ಗತ ಸಂಬಂಧಗಳನ್ನು ರೂಢಿಸಿಕೊಂಡಾಗಲೇ ಬದುಕಿನ ವಿಷನ್ ವಿಸ್ತೃತಗೊಳ್ಳುತ್ತದೆ. ಈ ಹಂತದಲ್ಲಿ ಸೃಜನಶೀಲತೆಯ ಬಗ್ಗೆ ಮಾತನಾಡುತ್ತಾ ವಿಮರ್ಶಕಿ ಎತ್ತಿರುವ ಅಧಿಕಾರದ ಪ್ರಶ್ನೆ ಲೇಖಕಿಯರಲ್ಲಿ ಕೆಲವು ಜವಾಬ್ದಾರಿಗಳ ಬಗ್ಗೆ ಆಲೋಚನೆಗಳನ್ನು ರೂಢಿಸುವಲ್ಲಿ ನೆರವಾಗಬಲ್ಲದು ಎಂಬರ್ಥದಲ್ಲಿ ಮೇಲಿನ ಮಾತುಗಳು ನನಗೆ ಮಹತ್ವದ್ದಾಗಿ ಕಾಣಿಸುತ್ತದೆ. ಮಾನವ ಜನಾಂಗದ ಸಾಧ್ಯತೆಗಳಿಗೆ ತುಡಿಯ ಬಯಸುವ ಯಾವುದೇ ಲೇಖಕಿ, - ಸಂಸ್ಕೃತಿಯ 'ಕಾಣ್ಕೆ'ಯನ್ನು ಕಾಣಬಯಸುವ ಲೇಖಕಿ ತನ್ನ ಬದುಕು, ಆಯ್ಕೆ, ಅನುಭವ ಹಾಗೂ ತನ್ನ ಒಳ ದೃಷ್ಟಿಕೋನದಿಂದ ಈ ಸಂಸ್ಕೃತಿಗೆ ತಾನೇನು ನೀಡುತ್ತೇನೆಂಬ ಜವಾಬ್ದಾರಿಯ ಬಗ್ಗೆ ಯೋಚಿಸಬೇಕಾದ ಮಹತ್ವದ ಚಿಂತನೆಯತ್ತ ಈ ಸಂಕಲನದ ಹಲವಾರು ಲೇಖನಗಳು ನಮ್ಮನ್ನು ತೊಡಗಿಸುತ್ತವೆ.

ಸ್ತ್ರೀವಾದ, ಸ್ತ್ರೀತ್ವ, ಸ್ತ್ರೀ ಸಂವೇದನೆಗಳ ಚರ್ಚೆಯನ್ನೂ ಸಹ ವ್ಯಾಪಕವಾಗಿ ಈ ಸಂಕಲನ ಎತ್ತುತ್ತದೆ. ಈ ಮೂಲಕ ಸಂಸ್ಕೃತಿ-ಪ್ರಕೃತಿ, ಸತ್ಯ, ಮಿಥ್ಯೆ; ವಿಚಾರ-ಭಾವನೆ, ಪುರುಷ-ಸ್ತ್ರೀ ಈ ಧೃವೀಕೃತ ಕಲ್ಪನೆಗಳ ಚರ್ಚೆಗೂ ಅವಕಾಶ ಮಾಡಿ ಕೊಡುತ್ತದೆ. ಜೊತೆಗೆ ಸ್ತ್ರೀ ಸಂಸ್ಕೃತಿ ಉಪ ಸಂಸ್ಕೃತಿಯಾಗಿರುವ ಬಗ್ಗೆ, ಉಪ ಸಂಸ್ಕೃತಿಯು ಮುಖ್ಯ ಸಂಸ್ಕೃತಿಯ ಅಧೀನವಾಗಿರುವ ರೀತಿ, ಅಂಚಿಗೆ ಒತ್ತರಿಸಲ್ಪಟ್ಟ ಅರಿವು - ಆದರೆ ಇದು ಅನಿವಾರ್ಯವಲ್ಲ ಎಂಬುದರ ಅರಿವಿಗೆ ಚಾಲನೆ ಕೊಡುವುದರ ಕಡೆಗೆ ಸ್ತ್ರೀವಾದಿ ಸಾಹಿತ್ಯ ಕ್ರಿಯಾಶೀಲವಾಗುತ್ತದೆ ಎನ್ನುವ ವಿಮರ್ಶಕಿ - ಸಾಹಿತ್ಯ ವಿಮರ್ಶೆಗೊಂದು ಚೌಕಟ್ಟು

ವಿವರಿಸುತ್ತಲೇ ಸ್ತ್ರೀವಾದಿ ಸಾಹಿತ್ಯದ ವಿಷನ್ನನ್ನೂ ಕೂಡಾ ವಿವರಿಸುತ್ತಾರೆ.

ಕೌಟುಂಬಿಕ ಚೌಕಟ್ಟಿಗೆ ಸವಾಲೆಸೆದೂ ಕೂಡಾ ಹೆಣ್ಣುತನವನ್ನು 'ನರಕಹೇತು' ಎಂದು ನಂಬಿದ ಅಕ್ಕ-ಮಹಾದೇವಿಯ ಸ್ತ್ರೀತ್ವದ ಮಾದರಿ, ಹೊನ್ನಮ್ಮನ ಮಾತೃತ್ವ, ಔದಾರ್ಯ ಗುಣದ ಸ್ತ್ರೀತ್ವದ ಮಾದರಿ, ಕಲ್ಯಾಣಮ್ಮನವರ ಕುಟುಂಬಿನಿ, ಜಗನ್ಮಾತೆಯ ಪ್ರತೀಕಗಳನ್ನು ಇವರು ಒಂದು ಸಾಮಾಜಿಕ/ರಾಜಕೀಯ ಹಿನ್ನೆಲೆಯಲ್ಲಿ ವಿವರಿಸುತ್ತಾರೆ. ರಾಷ್ಟ್ರೀಯತಾ ಚಳುವಳಿ ಬಹು ಪ್ರಧಾನವಾಗಿ ಸ್ತ್ರೀಯನ್ನು-ಸಂಸ್ಕೃತಿಯನ್ನು ಒಂದಾಗಿ ಸ್ವೀಕರಿಸಿದ ಚಳುವಳಿಯಾಗಿತ್ತು ಎನ್ನುವುದನ್ನು ನೆನಪಿಸುವ ಇವರು ಇದರ ಹಿನ್ನೆಲೆಯಲ್ಲಿ ಕೂಡಾ ಮಹಿಳೆಯರ ಬರಹಗಳನ್ನು ಚರ್ಚಿಸುತ್ತಾರೆ. ಭಾರತದಾದ್ಯಂತ ಹರಡಿದ್ದ ನವೋದಯದ ಸಾಂಸ್ಕೃತಿಕ ಸಂಘರ್ಷದ ಕಾವಿನಲ್ಲಿ ತಿಲಕ್, ಗಾಂಧಿ ಮುಂತಾದವರೆಲ್ಲ ಪ್ರತಿಪಾದಿಸಿದ್ದ ಸ್ತ್ರೀ ಮೌಲ್ಯಗಳನ್ನು ಸ್ತ್ರೀಯರೂ ಪುನರುಚ್ಚರಿಸಿದ್ದರು ಎನ್ನುವ ಇವರು ಸರಸ್ವತಿಬಾಯಿ ರಾಜವಾಡೆ, ಕೊಡಗಿನ ಗೌರಮ್ಮ, ಎಚ್. ವಿ. ಸಾವಿತ್ರಮ್ಮ ಎಲ್ಲಿ ಭಿನ್ನವಾಗುತ್ತಾರೆ ಎಂಬುದನ್ನು ವಿವರಿಸುತ್ತಾರೆ. ವಿವಾಹ/ಕುಟುಂಬದ ಚೌಕಟ್ಟಿನಿಂದಲೇ ಬರೆದ ತ್ರಿವೇಣಿ, ಪ್ರಾಚೀನ ಮೌಲ್ಯದ ಹಳಹಳಿಕೆಗಳೊಡನೆ, ಅದರ ಮೌಲ್ಯದ ಪ್ರತೀಕಗಳೊಡನೆಯೇ ಹೆಚ್ಚಾಗಿ ಬರೆದ ಎಂ. ಕೆ. ಇಂದಿರಾ, ಮಾರ್ಕ್ಸಿಸ್ಟ್ ರಾಜಕೀಯ ಚೌಕಟ್ಟಿನ ನೆಲೆಯಿಂದಾಗಿ ಭಿನ್ನವಾಗಿ ಬರೆದ ಡಾ. ಅನುಪಮಾ ನಿರಂಜನ, ಅಸ್ತಿತ್ವವಾದದ ನೆಲೆಯಲ್ಲಿ ಸ್ತ್ರೀ ವ್ಯಕ್ತಿತ್ವ ಶೋಧಿಸಿ ಬರೆದ ವೀಣಾ - ಈಗಿನ ಲೇಖಕಿಯರಾದ ವೈದೇಹಿ, ಸಾರಾ ಪ್ರತಿಯೊಬ್ಬರ ಬಗೆಗಿನ ಬರಹಗಳ ವಿಮರ್ಶೆಯಲ್ಲಿ ಸ್ತ್ರೀವಾದದ ಭಿನ್ನ ಭಿನ್ನ, ಮುಖಗಳನ್ನು ಭಿನ್ನ ಭಿನ್ನ ರಾಜಕೀಯ, ಸಾಮಾಜಿಕ ಆಯಾಮದಲ್ಲಿ ಗುರುತಿಸುತ್ತಾರೆ. ಈ ಚರ್ಚೆ ತಾತ್ವಿಕ ರೂಪ-ರೇಷೆಯ ಜೊತೆಗೆ ಮಹಿಳಾ ಸಾಹಿತ್ಯಕ್ಕಿರಬೇಕಾದ ವಿಷನ್ ಕೂಡಾ ಹೇಳುತ್ತದೆ ಎಂಬ ನನ್ನ ವಾದಕ್ಕೆ ವಿಮರ್ಶಕಿಯ ಈ ಕೆಳಗಿನ ಮಾತುಗಳು ಉಲ್ಲೇಖಾರ್ಹ :

"ವಿಶ್ವದ ವ್ಯವಸ್ಥೆಯ ಮೂಲಶಕ್ತಿಯ ಸಂಕೇತವಾಗಿ ಆಧ್ಯಾತ್ಮಿಕ ನೆಲೆಯಲ್ಲಿ ಪುರುಷನಿಂದ ಗುರುತಿಸಲ್ಪಡುವ ಸ್ತ್ರೀ ವಾಸ್ತವ ಬದುಕಿನಲ್ಲಿ ಅವನ ತೊತ್ತಾಗಿ ಮಾಡಲ್ಪಟ್ಟಿದ್ದು, ಈ ಎರಡು ಅತಿರೇಖಗಳ ನಡುವೆ ತನ್ನ ನಿಜ ಸ್ವರೂಪ ಏನೆಂದು ಆಕೆಯೀಗ ಕಂಡುಕೊಳ್ಳಬಯಸುತ್ತಿದ್ದಾಳೆ. ಈ ಕಾಣ್ಕೆಯ ಇದುವರೆಗಿನ ರೀತಿ ಆಕೆಯ ವ್ಯಕ್ತಿತ್ವದೊಳಗೇ ಆಗಿರುವ ವಿಭಜನೆ, ವಿಘಟನೆಗಳ ದುರಂತವನ್ನು ಗ್ರಹಿಸುವಂತಹದು. ಪ್ರಶ್ನಿಸದೇ ಸ್ವೀಕರಿಸಲ್ಪಟ್ಟಿದ್ದ ಜಾಡಿನಿಂದ ಹಳಿ ತಪ್ಪಲ್ಪಟ್ಟಿರುವ ಆಕೆ-ಈವರೆಗೆ ತಾನು ಭದ್ರ ಎಂದು ಆತುಕೊಂಡುದ್ದುದು ತನ್ನ ನೆಲೆಯೇ ಅಲ್ಲವೆಂಬ ಅರಿವಿನಿದಿರು ವಿಚಲಿತಳಾಗಿದ್ದಾಳೆ. ಈಗ ಪ್ರಪಂಚ ಆಕೆಗೆ ಸುಂದರ ಕನಸಲ್ಲ. ಮರು ಮೌಲ್ಯ ಸೃಷ್ಟಿ ಮಾಡಬೇಕಾದ ಬದುಕಿನ ಹೊಸ ಅರ್ಥ ನಿರ್ಧರಿಸುವ ಯಾತನಾದಾಯಕ ತುರ್ತು ಆಕೆಯೆದುರಿಗಿರುವ ಸವಾಲಾಗಿದೆ. ಕನ್ನಡದ ಕತೆಗಾರ್ತಿಯರ, ಲೇಖಕಿಯರ, ಕಾದಂಬರಿಯ ನಾಯಕಿಯರು ಈ ಸ್ಥಿತಿಯಲ್ಲಿ ಒಂದೋ ಮಿಥ್ಯಾ ಅಸ್ತಿತ್ವಕ್ಕೆ ತಳ್ಳಲ್ಪಡುವ ಇಲ್ಲವೇ ವಿನಾಶದ ದಾರಿ ಹಿಡಿವ ಆಯ್ಕೆಗಳತ್ತ ಸಾಗುವವರು. ಆದರೆ ತಮ್ಮಲ್ಲಿ ಸಾಮರ್ಥ್ಯ ನಿಜವಾಗಿ ಬೆಳೆಸಿಕೊಂಡವರು ತಮ್ಮ ಸಾಧನೆಯ ಸ್ವಯಂ ಸಿದ್ಧತೆಯನ್ನು ಅನುಭವಿಸಲು ಇತರರ ರಕ್ಷಣೆಯ ನೆರಳಿಗೆ ಧಾವಿಸದೆ, ಯಾರೊಂದಿಗೂ ಸ್ಪರ್ಧಿಸುವ ಅಗತ್ಯವಿಲ್ಲದವರು ಇಂಥ ದೃಢವಾದ ವ್ಯಕ್ತಿತ್ವಗಳ ನಿರ್ಮಾಣ ಇನ್ನೂ ಆಗಬೇಕಿದೆ. ಚಿನಕುರುಳಿಗಳಂತೆ ಅಲ್ಲಲ್ಲಿ ಸಿಡಿಯುತ್ತಿರುವ, ಮಿಂಚು ಹುಳುಗಳಂತೆ ಮಿನುಗುತ್ತಿರುವ ಈ ಶಕ್ತಿ ಸಾಂದ್ರೀಕೃತ ವಾಗಬೇಕಿದೆ. "ಆತುರದ ಅಗತ್ಯವಿಲ್ಲದ, ಹೊಳೆಯಬೇಕೆಂಬ ಅವಶ್ಯಕತೆಯಿಲ್ಲದ, ತನ್ನಷ್ಟಕ್ಕೆ ತಾನೇ ಆಗುವುದರ ಹೊರತು ಬೇರಾರು ಆಗಬೇಕಾದ ಅವಶ್ಯಕತೆಯಿಲ್ಲದ ಪರಿಪೂರ್ಣ ಸ್ತ್ರೀಯ ಸೃಷ್ಟಿ ಆಗಬೇಕಿದೆ" (ಪು. 34, 35)

ಇಂದಿರಾಬಾಯಿ/ಇಂದಿರಾ, ಮಾಡಿದ್ದುಣ್ಣೋ ಮಹರಾಯ, ಸರಸಮ್ಮನ ಸಮಾಧಿ, ಕಾನೂರು ಸುಬ್ಬಮ್ಮ ಹೆಗ್ಗಡತಿ, ಬನಶಂಕರಿ/ವಾತ್ಸಲ್ಯ ಪಥ, ಮುಕ್ತಿ ಮೂರು ದಾರಿಗಳು, ಒಡಲಾಳ - ಇವುಗಳ ವಿಮರ್ಶೆಯಲ್ಲಿ ಇವರು ಬದಲಾಗುತ್ತಿರುವ ಮಹಿಳೆಯ ಬಗ್ಗೆಗಿನ ಕಲ್ಪನೆಗಳನ್ನು ಗುರುತಿಸುತ್ತಾರೆ. ಇವರು ಒಟ್ಟಾಗಿ ಗುರುತಿಸುವ ಕಲ್ಪನೆಗಳು - ಪುರುಷ ಗ್ರಹಿಕೆಯ ಬಗ್ಗೆ ವಿಮರ್ಶಿಸುವ ವಿಧಾನ ಸಾಕಷ್ಟು ಚರ್ಚೆಗೆ ಅವಕಾಶ ಮಾಡಿಕೊಡುವ ಸಾಧ್ಯತೆ ಹೊಂದಿದೆ. ಇಂತಹ ಚರ್ಚೆಗಳು ಸ್ತ್ರೀವಾದಿ ಸಾಹಿತ್ಯ ಅಭ್ಯಸಸಿಗಳಿಗೆ, ಸಾಹಿತ್ಯ ಪರಂಪರೆಗೆ, ಸಾಹಿತ್ಯ ಚರಿತ್ರೆಗೆ ಒಂದು ಅರ್ಥಪೂರ್ಣ ನೋಟ ದೊರಕಿಸಿಕೊಡುವುದರಿಂದಲೇ ಈ ಸಂಕಲನ ಚಾರಿತ್ರಿಕವಾಗಿ ಮುಖ್ಯವಾಗುತ್ತದೆ ಎಂದು ನನ್ನ ಅನಿಸಿಕೆ.

'ವಿಚಯ'ದ ಎರಡನೆಯ ಭಾಗದಲ್ಲಿ ಇರುವ ಎಂಟು ಲೇಖನಗಳನ್ನು ಗಮನಿಸಿದಾಗ ಸ್ತ್ರೀವಾದಿ ಸಾಹಿತ್ಯಕ್ಕೆ - ಸ್ತ್ರೀವಾದಿ ಇತಿಹಾಸ ಎಷ್ಟು ಅಗತ್ಯ ಎಂಬ ಅರಿವು ಮೂಡುತ್ತದೆ. ಈ ಭಾಗಗಳನ್ನು ಓದುವಾಗ ನಮಗೆ ಅರಿವಿರದಿದ್ದ ಇಂತಹ ಚರಿತ್ರೆ ಒಂದು ಸ್ಫೂರ್ತಿಯ ಅಲೆಯನ್ನು ಎಬ್ಬಿಸುತ್ತದೆ. ಎಪ್ಪತ್ತರ ದಶಕದ ಪ್ರಾರಂಭದಲ್ಲಿ ಸಾಹಿತ್ಯದಿಂದ ಪ್ರಭಾವಿತಳಾದ ನಾನು

ಓದಿದ್ದೆಲ್ಲ ನಮ್ಮ ಸಾಹಿತ್ಯ ಕುರಿತೇ. ಲೇಖಕಿಯರದ್ದೇ ಒಂದು ಇತಿಹಾಸವಿದೆ ಎಂಬ ಕಲ್ಪನೆ ಮೂಡಿ ಬಂದದ್ದೇ ಇತ್ತೀಚಿನ ವರ್ಷಗಳ ಶೋಧನೆಯ ಫಲವಾಗಿ. ಈ ಲೇಖಕಿಯರ ಮೇಲೆ ಬೆಳಕು ಚೆಲ್ಲಿದ್ದು ಎಷ್ಟೊಂದು ಮಹತ್ವವಾದುದು ಎಂಬುದು ಸ್ತ್ರೀವಾದಿಗಳಿಗೆ ತಿಳಿದಿರುವ ವಿಚಾರ. ಈ ಹಿನ್ನೆಲೆಯಲ್ಲಿ ವಿಮರ್ಶಕಿಯ ಮಾತು ಗಮನಾರ್ಹ.

"ಸ್ವಾತಂತ್ರ್ಯ ಪೂರ್ವದ ಈ ಐವರು ಲೇಖಕಿಯರನ್ನು ಗಮನಿಸುವಾಗ ಎರಡು ಮುಖ್ಯ ಸಂಗತಿಗಳು ಗಮನಾರ್ಹವಾಗಿ ಇಂದು ತೋರುತ್ತವೆ. ಮೊದಲನೆಯದು ಸ್ತ್ರೀ ಸಮುದಾಯದ ಉನ್ನತಿಗಾಗಿ ಅವರು ತಮ್ಮನ್ನು ತಾವು ಜವಾಬ್ದಾರರೆಂದು ಗುರುತಿಸಿಕೊಂಡಿದ್ದುದು, ಮತ್ತು ಸಾಹಿತ್ಯದ ಮೂಲಕ ತಮ್ಮದೇ ಆದ ಜೀವನ ದರ್ಶನವನ್ನು ಒದಗಿಸಬೇಕೆಂಬ ಅರಿವನ್ನು ಪಡೆದಿದ್ದುದು. ಇವೆರಡೂ ಮುಂದಿನ ಪೀಳಿಗೆಯ ಲೇಖಕಿಯರಿಗೆ ನಿಜವಾಗಿಯೂ ಅನುಕರಣೀಯ ಅಂಶಗಳಾಗಿದ್ದರೂ, ನಾವು ಮಹಿಳಾ ಸಾಹಿತ್ಯದ ಇತಿಹಾಸದಲ್ಲಿ ಬೇರೆಯ ವಾಸ್ತವವನ್ನೇ ಕಾಣುತ್ತೇವೆ..... ಇಂತಹ ಪರಂಪರೆಯೊಂದು ತಮಗಿತ್ತು, ತಾವು ಪರಂಪರೆಯ ಹಿರಿಯರಿಂದ ಕಲಿತು ವಿಸ್ತರಿಸಬೇಕಾದ್ದು ಇದೆ ಎಂಬ ಅರಿವು ಮುಂದಿನ ಲೇಖಕಿಯರಲ್ಲಿ ಇಲ್ಲದೇ ಹೋದದ್ದು, ವಾಸ್ತವದಲ್ಲಿ ಮಹಿಳೆಯರ ಕಥಾಸಾಹಿತ್ಯ ದುರ್ಬಲವೂ, ಪೇಲವವೂ ಆದ ಸರಕು ಎಂಬ ಭಾವನೆ ಬೇರೂರಲು ಕಾರಣವಾಗಿರಬೇಕು. ಆದ್ದರಿಂದಲೇ ಸ್ವಂತದ ಅರಿವು ಲೇಖಕಿಯರಲ್ಲಿ ನವ್ಯದ ಅವಧಿಯಿಂದ ಮಾತ್ರ ತಲೆದೋರಿತು ಎಂಬ ಅರೆಸತ್ಯದ ಅಭಿಪ್ರಾಯಗಳನ್ನು ಕಣ್ಣು ಮುಚ್ಚಿ ಉದುರಿಸುತ್ತಾ ಹೋಗುವ ಪ್ರವೃತ್ತಿ ಇನ್ನೂ ನವ್ಯ ಮತ್ತು ನವ್ಯ ಪ್ರಭಾವಿತ ವಿಮರ್ಶಕರಲ್ಲಿ ಉಳಿದಿದೆ. ಮಾಸ್ತಿಯವರ ಕಥೆಗಳಿಂದ ಅನಂತಮೂರ್ತಿ, ಲಂಕೇಶ, ತೇಜಸ್ವಿ, ಚಿತ್ತಾಲರು ಬಹಳಷ್ಟು ಕಲಿತರು. ಮತ್ತೆ ಮಾಸ್ತಿ ಪ್ರಭಾವದಿಂದ ಬಿಡುಗಡೆ ಹೊಂದುತ್ತಲೇ ತಮ್ಮತನವನ್ನು ಸಾಧಿಸಲು ಶ್ರಮಿಸಿದರು. ಕನ್ನಡದ ಸಮಕಾಲೀನ ಕತೆಗಾರ್ತಿಯರಿಗೆ ಎಷ್ಟು ಜನರಿಗೆ ಹೀಗೆ ಹೇಳಿಕೊಳ್ಳಲು ಧೈರ್ಯವಿದೆ? ಅವರು ತಮ್ಮ ಪರಂಪರೆಯನ್ನು ಗುರುತಿಸುವಲ್ಲಿ ಕೇವಲ ಪುರುಷ ವಿಮರ್ಶಕರ ಮೋಹಕ ಅಭಿಪ್ರಾಯಗಳ ಸೆಳೆತದಲ್ಲಿ ಮೈ ಮರೆತರೆ? ಇದರಿಂದ ಇವರ ಬರಹಗಳು ಇಂದು ನಿಜಕ್ಕೂ ಮುಂದುವರೆಯಲಾಗದಂಥ ಸ್ಥಗಿತತೆಗೆ ಒಳಗಾಗುತ್ತಿಲ್ಲವೇ? ಎಂಬುದು ಚಿಂತಿಸಬೇಕಾದ ಸಂಗತಿ" (ಪು. 91, 92)

ಇದು ಬಹಳ ಮುಖ್ಯವಾದ ಮಾತು. ನಮ್ಮ ಇತಿಹಾಸದ ಬಗ್ಗೆ, ನಮ್ಮ ಪರಂಪರೆಯ ಬಗ್ಗೆ ನಮಗೆ ಅರಿವಿರಬೇಕು. ಸ್ತ್ರೀವಾದಿ ಬದುಕಿನ ಹೊಳವುಗಳನ್ನು ಅರಿತುಕೊಳ್ಳುವ ಪ್ರತಿಯೊಬ್ಬರಿಗೂ ಇಂದು ನಮ್ಮ ಪರಂಪರೆಯ ಅರಿವಿನ ಅಗತ್ಯವಿದೆ. ಇಲ್ಲಿ ಟಿ. ಎಸ್. ಎಲಿಯಟ್‌ನ tradition ಮತ್ತು Individualityಯಲ್ಲಿನ ಮಾತುಗಳನ್ನು ನಾವು ನೆನೆಯಬಹುದು. ಪರಂಪರೆಯ ಬಗ್ಗೆಗಿನ ಅರಿವಿನಿಂದ ಮಾತ್ರ ಒಳಿತು-ಕೆಡಕುಗಳನ್ನು ವಿವೇಚಿಸುವ, ಒಳಿತನ್ನು ಶೋಧಿಸುತ್ತ ಮತ್ತೆ ಅದಕ್ಕೆ ಚಾಲನೆ ಕೊಡುವ ಸಾಧ್ಯತೆ ಉಂಟಾಗುತ್ತದೆ. ನಮಗೊಂದು ಪರಂಪರೆಯಿತ್ತು, ಅದು ಸ್ತ್ರೀಯರ ಬದುಕನ್ನು ಶೋಧಿಸುವುದಾಗಿತ್ತು ಎಂಬುದು ನಮ್ಮೆಲ್ಲರ ಬದುಕಿನ ಭರವಸೆಯನ್ನು ಒಗ್ಗೂಡಿಸುವ ಪ್ರಯತ್ನವಾಗುತ್ತದೆ. ವಿಮರ್ಶಕಿಯ ಕೆಳಗಿನ ಮಾತುಗಳು ಈ ದೃಷ್ಟಿಯಿಂದ ಗಮನಾರ್ಹವಾಗಿವೆ :

"ಮಹಿಳಾ ದೃಷ್ಟಿಯ ಇತಿಹಾಸದ ಮರು ಮೌಲ್ಯಮಾಪನದಲ್ಲಿ ಸ್ತ್ರೀಯರು ಮತ್ತು ಪುರುಷರನ್ನು ವೀರರು-ದುರ್ಬಲರು, ಶೋಷಕರು-ಶೋಷಿತರು ಎದು ಕಪ್ಪು-ಬಿಳುಪುಗಳ ಮಾದರಿಗಳಲ್ಲಿ ನೋಡುವುದಿಲ್ಲ. ಬದಲಾಗಿ ಸ್ತ್ರೀಯರ ಐತಿಹಾಸಿಕವಾದ ಸಂಕೀರ್ಣ ಇರುವನ್ನು ಗಮನಕ್ಕೆ ತೆಗೆದುಕೊಳ್ಳಲಾಗುತ್ತದೆ. ಇತಿಹಾಸದಲ್ಲಿ ಮಹಿಳೆಯರು ಶೋಷಕರ ಜೊತೆ ಸಹಕರಿಸಿದ್ದಾರೆ. ಅವರನ್ನು ಅನುಕರಿಸಿದ್ದಾರೆ. ತಮ್ಮಂಥ ಇತರ ಮಹಿಳೆಯರ ಜೊತೆಗೂಡಿ ಪ್ರತಿ ಸಂಸ್ಕೃತಿ ರಚನೆಗೂ ಕಾರಣರಾಗಿದ್ದಾರೆ. ದೊಡ್ಡ ಉದ್ದಿಮೆಗಳ ಒಕ್ಕೂಟಗಳಿಗೆ, ಕ್ರಾಂತಿ ವಿರೋಧಿ ಯತ್ನಗಳಿಗೆ ನೆರವು ನೀಡಿದ್ದಾರೆ. ಹಾಗೆಯೇ ಜೀತದಾಳುಗಳ, ರೈತರ ದಂಗೆಗಳಲ್ಲೂ ಪಾಲು ಪಡೆದಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆಯ ಇತಿಹಾಸವು ಕರ್ತೃ ಸ್ಥಾನವನ್ನು ಇವರಿಗೆ ನೀಡದಿದ್ದಾಗ ತಮ್ಮಂತೆಯೇ ಸ್ಥಾನವಂಚಿತರಾದ ಇತರರೊಂದಿಗೆ ತಮ್ಮ ಅನುಭವ ಹಂಚಿಕೊಂಡಿದ್ದಾರೆ. ಸ್ತ್ರೀಯರ ಇತಿಹಾಸದ ಈ ಸಂಕೀರ್ಣ ರೂಪವನ್ನು ತೋರಿಸಿಕೊಡುವ ನೆಲೆಯಲ್ಲಿ ಸ್ತ್ರೀವಾದವು ಪ್ರಧಾನವಾಹಿನಿಯ ಇತಿಹಾಸಕ್ಕೆ ಒಂದು ಪ್ರಶ್ನೆಯಾಗುತ್ತದೆ. ಐತಿಹಾಸಿಕ ಪ್ರಕ್ರಿಯೆಯ ಕೇಂದ್ರದಲ್ಲಿ ದ್ವಂದ್ವ, ಅಸ್ಪಷ್ಟತೆ, ದುರಂತಗಳಿವೆ ಎಂಬುದನ್ನು ದಾಖಲಿಸುವುದು ಸ್ತ್ರೀವಾದಿ ನೆಲೆಯಿಂದ ನಡೆಯಬೇಕಾದ ಐತಿಹಾಸಿಕ ಮರು ಮೌಲ್ಯಮಾಪನದ ಗುರಿ. ಪ್ರಧಾನ ಇತಿಹಾಸದ ಮಾದರಿಗೆ ಪ್ರತಿ ಮಾದರಿಯನ್ನು ನಿರ್ಮಿಸುವುದು ಇದರ ಗುರಿ ಅಲ್ಲ" (ಪು. 19, 20)

ಈ ಹಿನ್ನೆಲೆಯಲ್ಲಿ ಆಂಧ್ರಪ್ರದೇಶದ ಸ್ತ್ರೀ ಸಂಘಟನೆ ತೆಲುಗಿನಲ್ಲಿ ತಂದ 'ಮನಕು ತಿಲಿಯನಿ ಮನ ಚರಿತ್ರೆ' ಪುಸ್ತಕವನ್ನು ಮುಖ್ಯವಾಗಿ ಗಮನಿಸಬಹುದಾಗಿದೆ. ತೆಲಂಗಾಣದ ರೈತಾಂಗ ಹೋರಾಟದಲ್ಲಿ ಸ್ತ್ರೀಯರ ಪಾತ್ರ ಗಮನಾರ್ಹ

ಮದರ ಕಡೆ ಇದು ಗಮನ ಸೆಳೆಯುತ್ತದೆ. ಬಹಿರಂಗವಾದ ತ್ತು ಆಂತರಿಕವಾದ ಇಬ್ಬಗೆಯ ಹೋರಾಟಗಳು ತೆಲಂಗಾಣದ -ಭೂಮಿ ಮತ್ತು ಜಾತಿ ಸಂಬಂಧಗಳಾಚೆಗಿನ ಮನುಷ್ಯ ಬಂಧಗಳಲ್ಲಿ ತನ್ನನ್ನು ವಿಸ್ತರಿಸಿಕೊಂಡು, ಎಲ್ಲಾ ಕ್ರೂರ ಕೋಲೆಗಳ ಕಳಚಿಕೊಂಡು ಮೈ ಕೊಡವಿಕೊಂಡಿದ್ದ ಐತಿಹಾಸಿಕ ಮುಖಿ ಪುರುಷ ಪ್ರಧಾನ ಮೌಲ್ಯಗಳ ನಡುವೆ ಹೂತು ೋದುದನ್ನು ಈ ಪುಸ್ತಕ ಪರಿಚಯಿಸುತ್ತದೆ ಎಂದು ಈ ತಕವನ್ನು ಕನ್ನಡಕ್ಕೆ ರೂಪಾಂತರಿಸಿದ ಲಕ್ಷ್ಮೀಪತಿಯವರ ತುಗಳು ಉಲ್ಲೇಖಾರ್ಹ. ಹೀಗೆಯೇ ಕಲ್ಯಾಣಮ್ಮ, ಮಲಾಂಬ, ಬೆಳಗೆರೆ ಜಾನಕಮ್ಮ, ಸರಸ್ವತಿಬಾಯಿ ಜವಾಡೆ ಇವರ ಬಗ್ಗೆ ನಡೆದ ಶೋಧನೆಗಳು, ಟವಾಗಿರುವ ಪುಸ್ತಕಗಳೂ ಸಹ ಇತಿಹಾಸದ ನಡುವೆ ದುಗಿಹೋದ ಚರಿತ್ರೆಯನ್ನು ನಮ್ಮ ಮುಂದೆ ಇಡುತ್ತವೆ. ದೃಷ್ಟಿಯಿಂದ ಗಮನಿಸಿದಾಗ ಸುಮಿತ್ರಾಬಾಯಿಯವರ ಲಿನ ಮಾತು ಈಗಿನ ಲೇಖಕಿಯರಿಗೆ ಸ್ಫೂರ್ತಿಯಾಗ ಕು.

ಈ ಸಂಕಲನದಲ್ಲಿ ಎದ್ದು ಕಾಣುವ ಇನ್ನೊಂದು ವಿಶಿಷ್ಟ ಶವೆಂದರೆ ಲೇಖಕಿಯ ಹರಿತ ದೃಷ್ಟಿಕೋನದ ವಿಮರ್ಶೆ. ವೇಚನಾಯುಕ್ತ ಕಟು ವಿಮರ್ಶೆ ಇಂದಿನ ಸಾಂಸ್ಕೃತಿಕ ತಾವರಣದಲ್ಲಿ ಅತ್ಯಂತ ಅಗತ್ಯ ಎಂಬುದು ನಮಗೆಲ್ಲರಿಗೂ ದದ್ದೇ. ಈ ರೀತಿಯ ಹರಿತ ದೃಷ್ಟಿಕೋನವನ್ನು ಈ ಮರ್ಶಾ ಸಂಕಲನ ಒಳಗೊಂಡಿದೆ. ಉದಾ:

“ಪ್ರಶ್ನೆ ಮತ್ತು ಪರಿಸರ’ದಲ್ಲಿ ಅನಂತಮೂರ್ತಿ ‘ಆ ವ ಫೋಕಸ್ಸು ಇಲ್ಲದ ಸಂಸ್ಕೃತಿ ನಮ್ಮದಾದ್ದರಿಂದ ಲ್ಲವನ್ನೂ ಒಳಗೊಳ್ಳುವ ಭೋಳೆತನ’ ಇದರ ಲಕ್ಷಣ ನ್ನುತ್ತಾರೆ. ಮಹಿಳೆಯರ ದೃಷ್ಟಿಯಿಂದ ನೋಡಿದರೆ ಬರೀ ಕಸ್ ಒಂದೇ ಏಕೆ, ಬಲವಾದ ಗೂಟವೇ ಇದೆ. ಅದೇ ರುಷ, ಅವನೇ ಆದಿ, ಅವನೇ ಮಧ್ಯ ಹಾಗೂ ಅಂತ್ಯ” (ಪು.)

“ಬದುಕಿನ ಒಂದು ಸ್ತರದಲ್ಲಿ ಮೂರನೆಯ ದಶಕದಲ್ಲಿ ಸ್ತವವಾಗಿಯೂ ಈ ಬಗೆಯ ಸ್ತ್ರೀ ವ್ಯಕ್ತಿಗಳು ಕಾಣಿಸಿ ಂಡಿದ್ದರಷ್ಟೇ ಅಲ್ಲ, ಆರ್. ಕಲ್ಯಾಣಮ್ಮ, ಶ್ಯಾಮಲಾದೇವಿ, ಸ್ವತೀಬಾಯಿ ರಾಜವಾಡೆಯಂತವರ ಬದುಕಿನ ಸಾಧನೆಗಳು ಕಾಲಮಾನಕ್ಕಿಂತ ಎಷ್ಟೋ ಮುಂದಿದ್ದವು. ಅಂತಹ ವ್ಯಕ್ತಿಗಳ ದುಕುಗಳು ಯಾಕೆ ವಿಚಾರಪರ ಲೇಖಕರ ಸಂವೇದನೆಗಳಿಗೆ ತೂಹಲಕಾರಿಯಾಗಲಿಲ್ಲವೆನ್ನುವುದು ಯೋಚಿಸಬೇಕಾದ ಗತಿ...... ಆದರೂ ಇಂತಹ ಯಾವೊಬ್ಬ ಲೇಖಕರೂ ಮೂಲಭೂತ ಸ್ತ್ರೀ ಪರತೆಯುಳ್ಳ ಹಾಗೂ ನಿಜವಾಗಿ ಎಲ್ಲಾ ಆಯಾಮಗಳಿಂದ ದೃಢವಾದ ಸ್ತ್ರೀ ವ್ಯಕ್ತಿಗಳು ತಮ್ಮೆದುರೇ ಬದುಕಿ ಹೋದಾಗಲೂ ಈ ಬಗ್ಗೆ ಕುತೂಹಲಿಗಳಾಗದಿರುವಂತೆ ಮಾಡಿದ್ದ ಶಕ್ತಿಗಳಾವುವು ಎಂಬುದು ಶೋಧನೀಯವಾದದ್ದು. ಈ ಹೆಂಗಸರು ಏನು ಮಾಡಬಲ್ಲರು ಮಹಾ ಎಂಬ ಅವಜ್ಞೆಯೇ? ಅಥವಾ ಸ್ಪರ್ಧಿಗಳಾದಾರೆಂಬ ಭೀತಿಯಿಂದ ಅಭಿಮುಖವಾಗಲಾರದ ಸ್ಥಿತಿಯೇ? ಅಥವಾ ತಮ್ಮ ಸುತ್ತಲಿನ ಪರಿಮಿತಿಗಳಿಂದಾಗಿ ತಮ್ಮ ವ್ಯಕ್ತಿತ್ವ ವಿಚಾರ ಕಾರ್ಯಾಚರಣೆಗಳ ಹಿಂದಿರುವ ತಮ್ಮ ಸ್ವತಂತ್ರ ಅಸ್ತಿತ್ವವನ್ನು ಮನದಟ್ಟು ಮಾಡಿಕೊಡಲಾರದ ಸ್ತ್ರೀಯರ ಅಸಹಾಯಕ ವಿಚ್ಛಿದ್ರ ಸ್ಥಿತಿಯೇ? ಸಾಮಾಜಿಕ ಉತ್ಪಾದಕತೆಯಲ್ಲಿ ಪಾಲುದಾರರಾಗದೇ ಉಳಿದಿದ್ದರ ಫಲವಾಗಿ ಪೇರಿಸಿಟ್ಟ ಮೌಲ್ಯಗಳ ಪರಿಣಾಮವೇ? (ಪು. 53, 54)

ಆಶಾದೇವಿ ಡೆಕ್ಕನ್ ಹೆರಾಲ್ಡ್ - ೧೩.೧.೧೯೯೧ರಲ್ಲಿ ನವೋದಯದ ಸ್ತ್ರೀ ಬರಹಗಾರರ ಬಗ್ಗೆ ಬರೆದ ಅಭಿಪ್ರಾಯ ಕುರಿತು (ಪು. 8) ವಿಮರ್ಶಕಿ ಹೇಳುವ ಮಾತುಗಳು, “ಈ ಮಾತುಗಳು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬರುತ್ತಿರುವ ಕನ್ನಡ ಸಾಹಿತ್ಯ ಕುರಿತ ಲೇಖನ ಸರಮಾಲೆಯಲ್ಲಿ ಸೇರಿರದಿದ್ದರೆ’ ಹಾಗೂ ರಾಮಚಂದ್ರ ಶರ್ಮರಂಥವರು ಇದನ್ನು ಇಂಗ್ಲೀಷಿಗೆ ಅನುವಾದಿಸಿರದಿದ್ದರೆ ಬಹುಶಃ ಇದೊಂದು ಅಪ್ರಬುದ್ಧ ಹೇಳಿಕೆಯೊಂದು ತಳ್ಳಿ ಹಾಕಬಹುದಿತ್ತು. ಆದರೆ ಇಂಥ ಅಭಿಪ್ರಾಯವೊಂದು ಜನಪ್ರಿಯವಾಗಿ ನಮ್ಮ ವಿಮರ್ಶಕರ ನಡುವೆ ಚಾಲನೆಯಲ್ಲಿರುವುದನ್ನು ಅದು ಸೂಚಿಸುವುದರಿಂದ ಇದನ್ನೊಂದು ಗಂಭೀರ ಸಂಗತಿಯಾಗಿ ಪರಿಗಣಿಸಿ ಅದರ ಸತ್ಯಾ-ಸತ್ಯತೆಯನ್ನು ಗಮನಕ್ಕೆ ತರುವುದು ಅವಶ್ಯ” (ಪು. 113).

ವಿಮರ್ಶಕಿಯ ಇಂತಹ ಗ್ರಹಿಕೆ ಹಾಗೂ ಕಟು ಟೀಕೆಯನ್ನು ನಾವು ಈ ಸಂಕಲನದಲ್ಲಿ ಗಮನಿಸಬಹುದಾಗಿದೆ. ಸಂಸ್ಕೃತಿಯ ಜವಾಬ್ದಾರಿಯ ಅರಿವಿರುವ ಪ್ರತಿ ಮಹಿಳೆಗೂ ಇಂದು ಇಂತಹ ನೇರ, ಸೂಕ್ಷ್ಮವಾದ ಗ್ರಹಿಕೆಯ, ಟೀಕೆಯ ಅಗತ್ಯವಿದೆ. ಈ ಗ್ರಹಿಕೆ ಪರಂಪರೆಯ ಇತಿಹಾಸವನ್ನು, ಸಾಮಾಜಿಕ ರಾಜಕೀಯ ದೃಷ್ಟಿಯ ತಾತ್ವಿಕ ನೆಲೆಗಟ್ಟನ್ನು ಹೊಂದಿರಬೇಕಾಗುತ್ತದೆ. ಪ್ರಸ್ತುತ ಸಂಸ್ಕೃತಿಯಾಚೆ ಮತ್ತೊಂದನ್ನು ಕಾಣುವ ‘ವಿಷನ್’ ಇರಲೇಬೇಕಾಗುತ್ತದೆ. ಇವೆಲ್ಲವನ್ನು ಈ ಸಂಕಲನ ಒಳಗೊಂಡಿದೆ. ಹಾಗಾಗಿ ಮೊದಲೇ ಹೇಳಿದಂತೆ ಸ್ತ್ರೀವಾದಿ ಸಾಹಿತ್ಯ ಇತಿಹಾಸದಲ್ಲಿ, ಬದುಕಿನ ದೃಷ್ಟಿಯಿಂದ ಚಾರಿತ್ರಿಕವಾಗಿ ಮಹತ್ವವಾದ ಕೃತಿಯಾಗುತ್ತದೆ.

ಸಾಹಿತ್ಯ ಹಾಗೂ ಬದುಕು ಪರಸ್ಪರ ಬದ್ಧವಾಗಿರಬೇಕು

ಮಹಾಶ್ವೇತದೇವಿ

"ಪುರುಷ ನಾಶ ಪಡಿಸಲು ಹೋರಾಡಿದರೆ, ಹೆಣ್ಣು ನಾಶ ಪಡಿಸಿದ್ದನ್ನು ಪುನಃ ಕಟ್ಟಲು ಹೋರಾಡುತ್ತಾಳೆ. ಯಾವುದೇ ಕ್ರಾಂತಿಗೆ ಅತ್ಯವಶ್ಯವಾದ ಪುನಃ ಸೃಷ್ಟಿಸುವ ಶಕ್ತಿ ಇರುವುದು ಬರಿ ಹೆಣ್ಣಿಗಷ್ಟೇ"

ಖ್ಯಾತ ಬಂಗಾಲಿ ಲೇಖಕಿ ಮಹಾಶ್ವೇತ ದೇವಿಯವರ ಮಾತುಗಳಿವು. ಸಾಹಿತ್ಯ ಹಾಗು ಬುಡಕಟ್ಟು ಜನಾಂಗಗಳ ಹೋರಾಟ, ಎರಡರಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಈಕೆ, ಸಾಹಿತ್ಯ ಹಾಗೂ ಬದುಕು ಪರಸ್ಪರ ಬದ್ಧವಾಗಿರಬೇಕು ಎನ್ನುತ್ತಾರೆ. ಅದನ್ನು ನಿಜವಾಗಿಸುತ್ತಲೂ ಇದ್ದಾರೆ. ಎಪ್ಪತ್ತು ವರ್ಷವಾದರೂ ಬತ್ತದ ಉತ್ಸಾಹ ಅವರದು. ಸದಾ ಚಟುವಟಿಕೆಯಿಂದಿರುವ ಆಕೆ ಚೈತನ್ಯದ ಚಿಲುಮೆ.

ಮಹಾಶ್ವೇತ ದೇವಿಯವರು ೧೯೫೭ರಿಂದಲೂ ಬುಡಕಟ್ಟು ಜನಾಂಗಗಳ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇದಕ್ಕೆ ಮೊದಲೂ, ಹೋರಾಟವನ್ನು ಮಾನಸಿಕವಾಗಿ ಬೆಂಬಲಿಸುತ್ತ ಇದ್ದವರು ೧೯೫೭ರಿಂದ ಬಿಹಾರದ ಪಲಮುವಿಗೆ ಹೋಗಲಾರಂಭಿಸಿದರು. ಅತ್ಯಂತ ಬಡ ಜಿಲ್ಲೆಯಾದ ಪಲಮುವಿನಲ್ಲಿ 'ಪಲಮು ಜಿಲ್ಲಾ, ಜೀತ ಪದ್ಧತಿ ನಿರ್ಮೂಲನಾ ಸಂಘಟನೆ'ಯನ್ನು ಪ್ರಾರಂಭಿಸಿ ಸಹಸ್ರಾರು ಜೀತದಾಳುಗಳನ್ನು ಸಂಘಟಿಸಿದರು. ಬುಡಕಟ್ಟು ಜನಗಳ ಬಗ್ಗೆ ಬರಿಯ ಸಹಾನುಭೂತಿ ತೋರುವುದು, ಅವರ ಬಗ್ಗೆ ಬರೆಯುವುದರಿಂದ ಏನೂ ಲಾಭವಿಲ್ಲ ಎಂದು ಅನ್ನಿಸಿದಾಗ, ಅವರಲ್ಲಿಗೇ ಹೋಗಿ, ಅವರಲ್ಲೊಬ್ಬರಾಗಿ ಬದುಕಲು ಶುರು ಮಾಡಿದರು. ಅವರಲ್ಲೊಬ್ಬಳಾಗಿ ಬದುಕಿದ್ದರಿಂದಲೇ, ಅವರ ಸಮಸ್ಯೆಗಳನ್ನು ಅವರ ದೃಷ್ಟಿಕೋನದಿಂದಲೆ ಗ್ರಹಿಸಿ ಪರಿಹಾರ ಹುಡುಕಲು ಸಾಧ್ಯವಾಯಿತು ಎಂದು ಅವರು ಹೇಳುತ್ತಾರೆ. ಇದು ಹೋರಾಟದ ಬಗ್ಗೆ ಆಕೆಗಿರುವ ಬದ್ಧತೆಯನ್ನು ತೋರುತ್ತದೆ. ಅವರೊಂದಿಗಿನ ಬದುಕಿನ ಫಲವಾಗಿ ಮೂಡಿದ್ದೆ "ಅರಣ್ಯೇರ್ ಅಧಿಕಾರ್" (ಅರಣ್ಯ ಯಾರದು?) ಈ ಪುಸ್ತಕ, ಬುಡಕಟ್ಟು ಜನಾಂಗದ ಹಕ್ಕಿಗಾಗಿ ಹೋರಾಡಿ, ಮಡಿದ ಬಿರ್ಸಾ ಮುಂಡಾನನ್ನು ಕುರಿತದ್ದು.

ಮಹಾಶ್ವೇತದೇವಿಯವರು ಪಶ್ಚಿಮ ಬಂಗಾಳದ ಎರ ಪ್ರಮುಖ ಬುಡಕಟ್ಟುಗಳಾದ ಲೋಧರು ಹಾಗು ಖೇರಿಯರನ ಸಂಘಟಿಸುವ ಕೆಲಸವನ್ನು ಗೋಪಿವಲ್ಲಬ್ ಸಿಂಗ್ ಅವರೊಂದಿ ಮಾಡಿದರು. ಗೋಪಿಯವರು ಬುಡಕಟ್ಟು ಜನಾಂಗಗ ಹೋರಾಟದಲ್ಲಿ ಮಡಿದವರು, ಆ ಜನರ ಬಗ್ಗೆ ಸಾಕಷ ಚಿಂತಿಸಿದವರು, ಇಂದು ಆ ಬುಡಕಟ್ಟಿನವ ಅರಣ್ಯಾಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾ ಅವರುಗಳು ನೆಟ್ಟ ಒಂದು ಲಕ್ಷ ಮರಗಳಲ್ಲಿ ಎಂಭತ ಸಾವಿರದಷ್ಟು ಬದುಕಿಕೊಂಡಿವೆ, ಚೆನ್ನಾಗಿ ಬೆಳೆದಿವೆಯೆಂದ ಅವರು ಹೆಮ್ಮೆಯಿಂದ ಹೇಳುತ್ತಾರೆ. ಜಮೀನಿನಲ್ಲಿ ನೀ ಪೂರೈಕೆ ಉತ್ತಮಗೊಂಡಿವೆ. ಅವರಲ್ಲಿ ಕೆಲವರ ಅಧ್ಯಾಪಕರಾಗಿದ್ದಾರೆ. ತರಬೇತಿ ಪಡೆಯಲೆಂದು ಕೆಲ ಹುಡುಗ ರಾಂಚಿಗೂ ಹೋಗಿದ್ದಾರೆ. ಮಹಿಳೆಯರು ಪ್ರಾಥಮಿಕ ಆರೋ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಸಾಮಾಜಿಕವಾ ಆರ್ಥಿಕವಾಗಿ ಅವರೀಗ ಸುಧಾರಿಸಿದ್ದಾರೆ. ಇದಕ್ಕೆಲ್ಲ ನಾ ಕಾರಣವೆನ್ನುವುದು ಸರಿಯಲ್ಲ. ಅವರೂ ಮುಂದೆ ಬಂದ ಜವಾಬ್ದಾರಿಯಿಂದ ನಡೆದುಕೊಂಡಿದ್ದರಿಂದ ಈಗಿನ ಸ್ಥಿ ಸಾಧ್ಯವಾಯಿತು ಎಂದು ವಿನಯವಾಗಿ ಹೇಳುವ ಆಕೆಗೆ ತಾನ ಮಾಡಿರುವ ಕೆಲಸದ ಬಗ್ಗೆ ಯಾವ ಹೆಮ್ಮೆ ಇಲ್ಲ. ನಿಜವಾಗಲ ಬುಡಕಟ್ಟು ಜನಾಂಗಗಳ ಒಳಿತನ್ನು ನಿಲುವು ಬಯಸುವಿರಾದ ಮೊದಲು ಅವರನ್ನು ಮಾನವರೆಂದು ಪರಿಗಣಿಸಿ, ಅವರಲ್ಲಿ ಹೋಗಿ, ಅವರನ್ನು ನಂಬಿ, ಪ್ರೀತಿಸಿ ವಿಶ್ವಾಸಕ್ಕೆ ತೆಗೆದುಕೊಳ್ಳಿ ಅವರ ಹಕ್ಕುಗಳ ಬಗ್ಗೆ ತಿಳಿಸಿ. ಅವರೇ ಆ ಹಕ್ಕುಗಳನ ಪಡೆಯಲು ಹೋರಾಡುಹರು ಎನ್ನುತ್ತಾರೆ ಆಕೆ.

ಮಹಾಶ್ವೇತದೇವಿಯವರು ಪಶ್ಚಿಮ ಬಂಗಾಳದ ಹಾ ದೇಶದ ಪ್ರಮುಖ ಪತ್ರಿಕೆಗಳಲ್ಲಿ ನಿರಂತರವಾಗಿ ಬುಡಕಟ ಜನಾಂಗಗಳ ಹೋರಾಟದ ಬಗ್ಗೆ ಬರೆಯುತ್ತಿರುತ್ತಾರೆ. ಎ ಶೋಷಣೆ ಕಂಡುಬಂದರೂ ಆ ಬಗ್ಗೆ ಕೂಡಲೇ ವರದಿ ಮಾಡು ಎನ್ನುವ ಆಕೆಗೆ, ಜನರ ಹೋರಾಟದಲ್ಲಿ ಭಾಗವಹಿಸುವುದ ಅದಮ್ಯ ಕರ್ತವ್ಯ. ಯಾವುದೇ ರೀತಿಯ ಅನ್ಯಾಯವನ

(೨೩ನೇ ಪುಟ ನೋ

ಮಹಾಶ್ವೇತದೇವಿಯವರ, ದೋಪ್ಡಿ ಹಾಗು ಇತರ ಕಥೆಗಳು : ಒಂದು ಅನಿಸಿಕೆ

ಖ್ಯಾತ ಬಂಗಾಲಿ ಲೇಖಕಿ ಮಹಾಶ್ವೇತದೇವಿಯವರ ಕಥೆಗಳನ್ನು ಶ್ರೀಮತಿ ಎಚ್. ಎಸ್. ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. "ದೋಪ್ಡಿ ಹಾಗು ಇತರ ಕಥೆಗಳು" - ಮಹಾಶ್ವೇತದೇವಿ ಅವರ ನಾಲ್ಕು ಕಥೆಗಳನ್ನು ಹಾಗು ಅವರ ಒಂದು ಸಂದರ್ಶನವನ್ನು ಒಳಗೊಂಡಿದೆ. ನೊಂದ ಜನರ ಹೋರಾಟದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಮಹಾಶ್ವೇತದೇವಿಯವರು, ತಮ್ಮ ಪುಸ್ತಕವನ್ನು ಕವಿ, ಹೋರಾಟಗಾರ ಕೆನ್‌ಸಾರೋವೀವಾ ಹಾಗು ಅವನ ಜನರಿಗೆ ಅರ್ಪಿಸಿದ್ದಾರೆ. ಬಗೋನಿ ಬುಡಕಟ್ಟಿಗೆ ಸೇರಿದ ಕೆನ್‌ನನ್ನು ಬಹುರಾಷ್ಟ್ರೀಯ ಕಂಪನಿಯ ವಿರುದ್ಧ ಹೋರಾಡಿದ್ದಕ್ಕೆ ಗಲ್ಲಿಗೇರಿಸಲಾಯ್ತು. ಈ ಹೋರಾಟದಲ್ಲಿ ಬಗೋನಿ ಬುಡಕಟ್ಟಿನ ಅನೇಕರು ಮಡಿದರು.

ಈ ಸಂಕಲನದಲ್ಲಿ "ದೋಪ್ಡಿ", "ಮಕರ್ ಸಮರ್", "ಸ್ತನದಾಯಿನಿ" ಹಾಗು ಉಪ್ಪು ಎಂಬ ನಾಲ್ಕು ಕಥೆಗಳಿವೆ.

ದೋಪ್ಡಿ - ಪೋಲಿಸರ ಕೈಲಿ ಸಿಕ್ಕಿ ಹೋರಾಡುವ ಬುಡಕಟ್ಟು ಹೆಣ್ಣೊಬ್ಬಳ ಕಥೆ. ಬುಡಕಟ್ಟು ಹೋರಾಟಗಾರರನ್ನು ಹಿಡಿಯಲು ಸೇವೆಯನ್ನು ನೇಮಿಸಲಾಗುತ್ತದೆ. ಹೋರಾಟಗಾರರಲ್ಲಿ ಮುಖ್ಯಳಾದ ದೋಪ್ಡಿಯನ್ನು ಹಿಡಿಯಲು ಬಹುಮಾನವನ್ನು ಘೋಷಿಸಲಾಗುತ್ತದೆ. ಚಾಣಾಕ್ಷಳಾದರೂ, ದೋಪ್ಡಿ ಸೈನಿಕನೊಬ್ಬನ ಕೈಗೆ ಸಿಕ್ಕಿ ಬೀಳುವಳು. ಇನ್ನು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲವೆಂದಾಗಲೂ ಹೆದರದೆ ತನ್ನೆಲ್ಲ ಶಕ್ತಿಯನ್ನು ಒಗ್ಗೂಡಿಸಿ ಕೂಗಿ ಸಂಜ್ಞೆಯ ಮೂಲಕ ಜೊತೆಯವರಿಗೆ ತಪ್ಪಿಸಿಕೊಳ್ಳುವಂತೆ ಎಚ್ಚರಿಕೆ ನೀಡುತ್ತಾರೆ. ಮುಂದೆ ಸೈನಿಕರ ಕೈಲಿ ಅವಳು ಪಡುವ ಯಾತನೆಯನ್ನು ವಿವರಿಸಲಾಗಿದೆ. ಆ ಯಾತನೆ ಓದುಗರ ಎದೆ ನಡುಗಿಸುತ್ತದೆ. ಸೈನಿಕರ ಕ್ರೌರ್ಯ ಕಣ್ಣಿಗೆ ರಾಚುತ್ತದೆ.

"ಕಾವಲುಗಾರ ಬಯೊನೆಟ್ ಊರುತ್ತಾ ಬಂದು ಅವಳ ಮೇಲೆ ಎರಗಿದ, ದೋಪ್ಡಿ ಕಣ್ಣು ಮುಚ್ಚಿದಳು. ಮುಂದೇನು ಎಂಬ ಪ್ರಶ್ನೆ ಇರಲಿಲ್ಲ. ಅವಳ ಮೇಲೆ ಹತ್ತಿಳಿಯುವ ಕೆಲಸ ನಡದೇ ನಡೆಯಿತು. ಚಂದ್ರಮ ಒಂದಷ್ಟು ಬೆಳಕನ್ನು ವಾಂತಿ ಮಾಡಿ ನಿದ್ದೆಗೆ ಬಿದ್ದ. ಕತ್ತಲಷ್ಟೇ ಉಳಿದದ್ದು. ರೆಕ್ಕೇ ಹರಡಿ ಬಿದ್ದ ಹದ್ದಿನಂತೆ ಒತ್ತಾಯವಾಗಿ ಹರಡಿದ್ದ ನಿಶ್ಚಲದೇಹ. ಮಾಂಸದ ಬಂದೂಕುಗಳು ಅದರ ಮೇಲೆ ಹತ್ತಿದವು, ಇಳಿದವು, ಹತ್ತಿ ಇಳಿಯುತ್ತಲೆ ಇದ್ದವು"

"ಕಣ್ಣಿನ ಕೊನೆಯಲ್ಲಿ ಉಕ್ಕಿದ ಕಂಬನಿಗೆ ದೋಪ್ಡಿ ಹೇಸಿದಳು. ಮಂತಾದ ಚಂದ್ರನ ಬೆಳಕಲ್ಲಿ, ಮೈಯುದ್ದಕ್ಕೂ ಕಣ್ಣಾಡಿಸಿದಳು. ರಾಕ್ಷಸರಂತೆ ಎರಗಿದ್ದಾರೆ. ಹಸಿ ಮಾಂಸವನ್ನೇ ತಿನ್ನುವವರಂತೆ ಮೊಲೆಗಳನ್ನು ಕಚ್ಚಿದ್ದರು. ಮೊಲೆ ತೊಟ್ಟುಗಳು ಪ್ರತ್ಯೇಕಗೊಂಡು ಜೋತಾಡುತ್ತಿದ್ದವು. ಎಷ್ಟು ಜನರಿರಬಹುದು? ನಾಲ್ಕು-ಐದು-ಆರು ದೋಪ್ಡಿಗೆ ಪ್ರಜ್ಞೆ ಇದ್ದಿದರಲ್ಲವೇ?"

ಕೊನೆಯಲ್ಲಿ ಸೇನಾನಾಯಕನ ಬಳಿಗೆ ಕರೆದೊಯ್ಯಲು, ದೋಪ್ಡಿಗೆ ಬಟ್ಟೆಗಳನ್ನು ನೀಡುವರು. ಕೊಟ್ಟ ಬಟ್ಟೆಯನ್ನು ಕಿತ್ತೆಸೆದು, ಬತ್ತಲಾಗೇ ಸೇನಾನಾಯಕನ ಮುಂದೆ ಬರುವ ದೋಪ್ಡಿ ಅವನ ಶರ್ಟಿನ ಮೇಲೆ ಉಗಿದು ಹೇಳುತ್ತಾಳೆ - "ನಾನು ನಾಚಿಕೆಪಟ್ಟುಕೊಳ್ಳಬೇಕಾದ ಯೋಗ್ಯತೆಯುಳ್ಳ ಒಬ್ಬ ಗಂಡಸೂ ಇಲ್ಲಿಲ್ಲ. ನನಗೆ ಹೇಗೆ ಬಟ್ಟೆ ತೊಡಿಸುವಿರೋ ನೋಡಿ ಬಿಡ್ತೀನಿ, ನೀವಿನ್ನೇನು ತಾನೆ ಮಾಡಲು ಸಾಧ್ಯ? ಬನ್ರೋ ಹಿಡಿರೋ ನನ್ನ, ಬನ್ರೋ ಹಿಡೀರೋ".

ಅವಳ ಮುಂದೆ ನಿಲ್ಲಲಾಗದೆ ಸೇನಾನಾಯಕ ತತ್ತರಿಸಿ ನಡುಗುತ್ತಾನೆ. ಓದುಗರು ತತ್ತರಿಸುವಂತಾಗುತ್ತದೆ. ಎಲ್ಲ ಕ್ರೌರ್ಯವನ್ನು ಎದುರಿಸಿಯೂ ಮತ್ತೆ ಎದ್ದು ನಿಲ್ಲುತ್ತಾಳೆ ದೋಪ್ಡಿ. ವಿನಾಶಕಾರಿ ಕ್ರೌರ್ಯದ ಎದಿರು ಮತ್ತೆ ಎದ್ದು ನಿಲ್ಲುವ ಹೆಣ್ಣಿನ ಶಕ್ತಿಯನ್ನು ಲೇಖಕಿ ಈ ಕಥೆಯಲ್ಲಿ ಎತ್ತಿ ಹಿಡಿದಿದ್ದಾರೆ.

ಎರಡನೇ ಕಥೆ "ಮಕರ್ ಸವರ್" - ಮಕರನೆಂಬ ಬುಡಕಟ್ಟು ಹುಡುಗನದು. ದೋಪ್ಡಿ ಕಥೆಯಲ್ಲಿ ಕ್ರೌರ್ಯ ಕಣ್ಣಿಗೆ ರಾಚುವಂತಿದ್ದರೆ, ಈ ಕಥೆಯಲ್ಲಿ ಅದು ಯಾವ ಸುಳಿವು, ಸದ್ದು ಇಲ್ಲದೆ ನಡೆಯುತ್ತದೆ. ಮಕಲ್ ಸವರ್ ಎಂಬ ಯುವಕ, ಖೇರಿಯಾ ಸವ್ ಎಂಬ ಒಂದುಳಿದ ಬುಡಕಟ್ಟು ಜನಾಂಗಕ್ಕೆ ಸೇರಿದವನು. ಮೂರು ಬಾರಿ ಮದುವೆಯಾದರೂ ಅವನಿಗೆ ಮಕ್ಕಳಾಗುವುದಿಲ್ಲ. ಮೂರನೇ ಹೆಂಡತಿ ಕುಮಾರಿ, ಮೊದಲಿನ ಹೆಂಡತಿಯರಿಬ್ಬರು ಬೇರೆಯವರನ್ನು ಮದುವೆಯಾಗಿ, ಮಕ್ಕಳು

ಹಡೆದಿರುವುದನ್ನು ತಿಳಿಸಿ, ಮಕರ ಒಬ್ಬ ಗಂಡನೇ ಅಲ್ಲವೆಂದು ಹಂಗಿಸುತ್ತಾಳೆ. ಇಬ್ಬರ ನಡುವೆ ಜಗಳವಾಗುತ್ತವೆ. ಊರಿನ ಶಾಲಾ ಶಿಕ್ಷಕ ಕಿಸ್ತೊಬಾಬು ಅನುಮಾನ ಪರಿಹಾರವಾಗಲೆಂದು ಮಕರನನ್ನು ವೈದ್ಯರ ಬಳಿ ಕರೆದೊಯ್ಯುವನು. ಅಲ್ಲಿ, ಅವನಿಗೆ ವ್ಯಾಸೆಕ್ಟಮಿ ಆಪರೇಷನ್ ಆಗಿರುವುದರಿಂದ ಮಕ್ಕಳಾಗುವುದಿಲ್ಲವೆಂದು ವೈದ್ಯರಿಂದ ತಿಳಿಯುತ್ತದೆ. ಮಕರನಿಗೆ ಏನೇನೂ ತಿಳಿಯುವುದಿಲ್ಲ. ಮಾಸ್ತರರೇ ಅವನನ್ನು ಕೆದಕಿ, ಕೆದಕಿ ಪ್ರಶ್ನಿಸುತ್ತಾರೆ - "ಹಿಂದೆ ಹೆಲ್ತ್ ಕ್ಯಾಂಪ್‌ಗೇನಾದರು ಹೋಗಿದ್ದೇಯಾ? ಆಪರೇಶನ್ ಏನಾದರು ಮಾಡಿದ್ದರಾ? ದುಡ್ಡೇನಾದರೂ ಕೊಟ್ಟಿದ್ದರಾ?" ಎಂದು. ಏನೋ ನೆನಪಾದಂತಾಗಿ ಮಕರ ಹೇಳುತ್ತಾನೆ - "ಹೌದು ಬಾಬು ನನಗೆ ನೆನಪಿದೆ, ಆ ದಿನವನ್ನು ನಾನು ಮರೆಯಲು ಸಾಧ್ಯವೇ? ಓಹ್! ಮಖಿನ್‌ಬಾಬುವಿನ ಮನೆಯಲ್ಲಿ ಎಷ್ಟು ಒಳ್ಳೆಯ ಊಟ!... ಮಾಂಸ, ಅನ್ನ, ಆಲುಗಡ್ಡೆ ಪಲ್ಯ...... ಇದು ನನ್ನ ಮೊದಲನೆಯ ಮದುವೆಗೂ ಮುಂಚೆಯೇ ಆದದ್ದು....... ನನಗೆ ಯಾವುದೇ ರೀತಿಯ ನೋವು ಆಗಲಿಲ್ಲ ಬಾಬೂ..... ಅಲ್ಲದೆ ನೂರು ರೂಪಾಯಿಯ ನೋಟು ಕೂಡ ಕೊಟ್ಟರು. ಕಿಸ್ತೊಬಾಬು ಒಂದೇ ಸಮನೆ ಅವನನ್ನು ನೋಡಿದ. ಮಕರನ ಈ ಪರಿ ಮುಗ್ಧತೆ ಅವನನ್ನು ಅಲ್ಲಾಡಿಸಿ ಬಿಟ್ಟಿತು"

ಜನಸಂಖ್ಯಾ ನಿಯಂತ್ರಣದ ಹೆಸರಿನಲ್ಲಿ, ವಿರಳವಾಗುತ್ತಿರುವ ಬುಡಕಟ್ಟಿಗೆ ಸೇರಿದ ಹುಡುಗನನ್ನು, ಯಾವ ಸುಳಿವು ಕೊಡದೆ ನಿರ್ವೀರ್ಯನನ್ನಾಗಿ ಮಾಡುವುದು ಮನ ಕಲಕಿಸುತ್ತದೆ. ಬುಡಕಟ್ಟು ಜನರಿಗೆ ಹೆಂಡತಿ, ಮಕ್ಕಳು, ಮನೆಯೇ ಐಶ್ವರ್ಯ. ನಿರಂತರವಾಗಿ ಪೋಲೀಸರಿಂದ, ಶ್ರೀಮಂತರಿಂದ ತುಳಿಸಿಕೊಳ್ಳುವ ಅವರಿಗೆ ಕೊಂಚ ನೆಮ್ಮದಿ ಸಿಗುವುದೆಂದರೆ ಆ ಐಶ್ವರ್ಯದಿಂದಷ್ಟೆ. ಆ ಪುಟ್ಟ ಐಶ್ವರ್ಯವನ್ನೂ ಕಳೆದುಕೊಂಡ ಮಕರ ಒಂಟಿಯಾಗುತ್ತಾನೆ. ತಬ್ಬಲಿಯಾಗುತ್ತಾನೆ.

ಒಮ್ಮೆ ಇತರರೊಂದಿಗೆ ಪೋಲೀಸರ ಕೈಗೆ ಸಿಕ್ಕಿಕೊಳ್ಳುವ ಮಕರ ಪೋಲೀಸರನ್ನು ಬೇಡಿಕೊಳ್ಳುತ್ತಾನೆ - "ನನ್ನನ್ನು ಇಲ್ಲಿರಿಸಿಕೊಂಡರೆ ಪರವಾಗಿಲ್ಲ, ನನ್ನ ಮನೆಯೆಂದರೆ ಖಾಲಿ ಗೂಡು, ಅಲ್ಲಿ ಯಾರೂ ಇಲ್ಲ, ಇತರರಿಗೆ ಬೆಚ್ಚನೆಯ ಮನೆಯಿದೆ, ಹೆಂಡತಿ ಮಕ್ಕಳು ಇದ್ದಾರೆ, ಅಡಿಗೆ ಮಾಡಿ ಕಾಯುತ್ತಿರುತ್ತಾರೆ, ಚೆಂದವಾದ ಮನೆಗಳಿರುವ ಅವರನ್ನು ಇಲ್ಲೇಕೆ ಕೊಳೆಯಿಸುತ್ತೀರಿ, ಅವರನ್ನು ಬಿಟ್ಟುಬಿಡಿ" ಮಕರನ ಮುಗ್ಧತೆ ಮನ ತಟ್ಟುತ್ತದೆ. ಆಗಲೂ ಪೋಲೀಸಿನವನಿಗೆ ದಿಮ್ಮಿ ಕಡಿಸಿಕೊಳ್ಳುವ ಯೋಚನೆ! ಮುಗ್ಧನನ್ನೂ ಗಿನಿಪಿಗ್‌ಗಳಂತೆ ಬಳಸಿಕೊಳ್ಳುವ ಕ್ರೂರ ವ್ಯವಸ್ಥೆಯನ್ನು ಲೇಖಕಿ ನಮ್ಮ ಮುಂದೆ ತೆರೆದಿಡುತ್ತಾರೆ.

ಮೂರನೇ ಕಥೆ "ಸ್ತನದಾಯಿನಿ" - ಮಕ್ಕಳಿಗೆ ಹಾಲೂಡಿಸುವುದನ್ನೆ ವೃತ್ತಿಯಾಗಿಸಿಕೊಂಡ ಹೆಣ್ಣೊಬ್ಬಳ ಕಥೆ. ಕಥಾನಾಯಕಿ ಯಶೋಧ ಜೀವನ ನಡೆಸಲಿಕ್ಕಾಗಿ ಜಮೀನ್ದಾರನ ಮನೆಯಲ್ಲಿ ಹುಟ್ಟುವ ಮಕ್ಕಳಿಗೆಲ್ಲ ಹಾಲೂಡಿಸುತ್ತಿರುತ್ತಾಳೆ. ಜಮೀನ್ದಾರನ ಮನೆಯ ಸೊಸೆಯಂದಿರ ಸೌಂದರ್ಯ ಹಾಳಾಗಬಾರದೆಂದು, ಯಶೋಧೆಗೆ ಹಾಲೂಣಿಸಲು ಹೇಳಲಾಗುತ್ತದೆ. ಯಶೋಧೆ ತಾನು ಹಡೆದ ಇಪ್ಪತ್ತು ಮಕ್ಕಳಲ್ಲದೆ, ಜಮೀನ್ದಾರನ ಮನೆಯ ಮೂವತ್ತು ಮಕ್ಕಳು ಸೇರಿ ಐವತ್ತು ಮಕ್ಕಳಿಗೆ ಹಾಲೂಡಿಸಿರುತ್ತಾಳೆ. ಹಾಲೂಡಿಸುವ ಕಾಲದವರೆಗೂ ಮಹಾಮಾತೆಯಾಗಿ, ಜಮೀನ್ದಾರನ ಮನೆಯವರಿಗೆಲ್ಲಾ ಪ್ರೀತಿ ಪಾತ್ರಳಾಗಿರುತ್ತಾಳೆ. ಅವಳಿಗೂ, ಅವಳ ಮನೆಯವರಿಗೂ ಕೊರತೆಯಾಗದಂತೆ ಆ ಮನೆಯವರು ನೋಡಿಕೊಳ್ಳುತ್ತಾರೆ. ಕಾಲ ಬದಲಾದಂತೆ ದೊಡ್ಡ ಮನಿಯಲ್ಲೂ ಬದಲಾವಣೆಗಳಾಗಿ ಅವಿಭಕ್ತ ಕುಟುಂಬ ಭಾಗವಾಗುತ್ತದೆ. ಯಶೋಧೆಗೆ ಅವಳು ಹೆರುವ ಸಾಮರ್ಥ್ಯದ ಮೇಲೆ ಸಮ್ಮಾನ, ಸವಲತ್ತುಗಳು ಸಿಗುತ್ತಿದ್ದುದರಿಂದ, ಹೆರುವ ಕ್ರಿಯೆ ನಿಂತ ಹಾಗೆ ಅವಳಿಂದ ಎಲ್ಲ ಸವಲತ್ತುಗಳು ದೂರವಾಗುತ್ತವೆ. ತೀರಾ ಕಂಗಾಲಾಗುವ ಯಶೋಧೆ, ಬೇಡಿಕೊಂಡಾಗ ಆ ಮನೆಯ ಸೊಸೆಯೊಬ್ಬಳು ಅವಳನ್ನು ಅಡುಗೆಯವಳನ್ನಾಗಿ ಇರಿಸಿಕೊಂಡು ಊಟ ಹಾಕಲು ಒಪ್ಪಿಕೊಳ್ಳುತ್ತಾಳೆ. ಇನ್ನು ಹೇಗೊ ಜೀವನ ನಡೆಯುವುದೆಂದುಕೊಳ್ಳುವಾಗ, ಅವಳು ಖಾಯಿಲೆ ಬೀಳುವಳು. ಅವಳ ಸ್ತನಗಳಿಗೆ ಕ್ಯಾನ್ಸರ್ ತಗುಲಿ ಬದುಕು ಯಾತನಾಮಯವಾಗುತ್ತದೆ. ಕೊನೆ ಗಳಿಗೆಯಲ್ಲಿ ಎಲ್ಲರೂ ಕೈ ಬಿಟ್ಟು, ದೂರದ ಆಸ್ಪತ್ರೆಯಲ್ಲಿ ಯಶೋಧೆ, ಕೀವು ತುಂಬಿ, ವಾಸನೆ ಹೊಡೆಯುತ್ತ ಅನಾಥಳಾಗಿ ಸಾಯುತ್ತಾಳೆ. ಯಾರೊ ಅಸ್ಪೃಶ್ಯನೊಬ್ಬ ಅಂತ್ಯಕ್ರಿಯೆ ಮಾಡುತ್ತಾನೆ. ಸಾಯುವ ವೇಳೆಯಲ್ಲೂ ತಾನು ಹಾಲುಡಿಸಿದ ಮಕ್ಕಳ ಬಗ್ಗೆ ಕನವರಿಸುವ ಯಶೋಧೆಗೆ ಆಸ್ಪತ್ರೆಯ ಡಾಕ್ಟರು, ನರ್ಸ್‌ಗಳೆಲ್ಲಾ ತಾನು ಹಾಲೂಡಿಸಿದ ಮಕ್ಕಳೆ ಎನಿಸಿ ಬಡಬಡಿಸುತ್ತಿರುತ್ತಾಳೆ. ಆ ಗಳಿಗೆಯಲ್ಲೂ ತಾನು ಹಾಲೂಡಿಸಿದ ಮಕ್ಕಳು ತನ್ನನ್ನು ನೋವಿಂದ ಪಾರುಮಾಡುವರೆಂದು ಕಾಯುವಳು.

ನಮ್ಮ ಸಂಸ್ಕೃತಿಯು ದೈವತ್ವಕ್ಕೆ ಹೋಲಿಸುವ ತಾಯ್ತನವನ್ನೆ ಸಂಪೂರ್ಣವಾಗಿ ನಂಬಿ, ನಡೆದ ಹೆಣ್ಣೊಬ್ಬಳು ಅದೇ ತಾಯ್ತನದಿಂದಾಗಿ ದುರಂತಮಯವಾಗಿ ಸಾಯುವುದನ್ನು ಲೇಖಕಿ ಸಮರ್ಥವಾಗಿ ಚಿತ್ರಿಸಿದ್ದಾರೆ. ಕಥೆಯಲ್ಲಿ, ನಮ್ಮ ಸಂಸ್ಕೃತಿಯ ಜನಪ್ರಿಯ ಮಹಿಳಾ ಪ್ರಜ್ಞೆಯ ಬಗ್ಗೆ ಲೇಖಕಿ ಹೀಗೆ ಬರೆಯುತ್ತಾರೆ - "ಸತಿ ಸಾವಿತ್ರಿ, ಸೀತೆಯರಿಂದ ಹಿಡಿದು ನಿರೂಪಾರಾಯ್, ಚಾಂದ್ ಉಸಾನಿವರೆಗೆ ಯಾವ ಭಾರತೀಯ ಮಹಿಳೆಯನ್ನೆ ನೋಡಿದರೂ ಅವರೆಲ್ಲರೂ ತೋರುವ ಪತಿ ಹಾಗು ಮಕ್ಕಳ ಮೇಲಿನ

ವ್ಯಾಮೋಹ, ಯಾವುದೇ ಕ್ಷಣದಲ್ಲೂ ಎಲ್ಲಾ ಕಾರಣ, ತರ್ಕಗಳನ್ನು ಮೀರಿ ಅರ್ಥವಿಲ್ಲದಂತೆ ತನ್ನನ್ನು ಅವರಿಗೆ ಕೊಟ್ಟುಕೊಳ್ಳುವ ಗುಣ, ಎಂಥಾ ಸಂದರ್ಭದಲ್ಲೂ ಅವರಿಗೆ ತಾನೇ ಹೊಂದಿಕೊಂಡು ಹೋಗುವ, ಅವರನ್ನು ಸದಾ ಕ್ಷಮಿಸಿಬಿಡುವ, ಅತಿ ಜನಪ್ರಿಯ ಮಹಿಳಾ ಪ್ರಜ್ಞೆಯೇ...."

ಆತ್ಮ ಸಮ್ಮಾನವೆ ಇಲ್ಲದೆ, ಇನ್ನೊಬ್ಬರಿಗೆಂದೆ ಜೀವ ಸವೆಸುವುದೇ ಅತ್ಯುತ್ತಮ ಮೌಲ್ಯವೆಂದು, ಅದನ್ನೆ ದೈವತ್ವ, ಮಾತೃತ್ವದ ಹೆಸರಿನಲ್ಲಿ ಹೇಳುವುದನ್ನು ಅದನ್ನೇ ಹೆಣ್ಣು ಅನಿವಾರ್ಯವಾಗಿ ನಂಬುವುದನ್ನು ಲೇಖಕಿ ಕೆಲವು ಸಾಲುಗಳಲ್ಲಿ ತೀಕ್ಷ್ಣವಾಗಿ ಹೇಳುತ್ತಾರೆ -

"ಭರತ ಭೂಮಿಯ ಗುಣವೇ ಅಷ್ಟೊಂದು ಮಹಿಮಾನ್ವಿತವಾದುದು. ಇಲ್ಲಿ ಹುಟ್ಟಿದ ಹೆಣ್ಣುಗಳು ತಾಯಿಯರೇ ಆಗುತ್ತಾರೆ, ಹಾಗೂ ಹುಟ್ಟಿದ ಎಲ್ಲ ಗಂಡುಗಳೂ ಅತ್ಯಂತ ಪವಿತ್ರವಾದ ಶೈಶವಾಸ್ಥೆಯಲ್ಲೇ ಮುಳುಗಿ ಇದ್ದು ಬಿಟ್ಟಿರುತ್ತಾರೆ. ಪ್ರತಿಯೊಬ್ಬ ಗಂಡೂ ದೇವ ಶಿಶು, ಪ್ರತಿ ಹೆಣ್ಣು ದೇವ ಮಾತೆ".

ಪ್ರಗತಿ ಪರರಾಗಿ ಯೋಚಿಸುವವರೂ ಸಹ ಹೇಗೆ ಪರೋಕ್ಷವಾಗಿ ಅದೇ ಮೌಲ್ಯವನ್ನು ಪ್ರತಿಪಾದಿಸುತ್ತಾರೆ ಎನ್ನುವುದನ್ನು ಈ ಸಾಲುಗಳಲ್ಲಿ ಕಾಣಬಹುದು -

"ಈ ಮಾತನ್ನು ಅಲ್ಲಗಳೆಯುವವರು ಹಳೆಯ ಚಿತ್ರಗಳ ಮೇಲೆ eternal she, Monalisa, Capassionania, Simonde Beauvoirರಂತಹ ಭಿತ್ತಿ ಚಿತ್ರಗಳನ್ನು ಅಂಟಿಸಿ ಬಿಟ್ಟು ಹೆಣ್ಣನ್ನು ನೋಡ ಬಯಸುವವರೂ ಸಹ ಎಷ್ಟೇ ಆಗಲಿ ಭಾರತೀಯ ಸಿಂಹದ ಮರಿಗಳೇ ಅಲ್ಲವೇ? ವಿದ್ಯಾವಂತರೆನಿಸಿಕೊಂಡ ಬಾಬುಗಳು ಈ ಎಲ್ಲವೂ ಹೆಣ್ಣಿನಲ್ಲಿರಬೇಕೆಂದು ತಿಳಿಸಿದಾಗ ತಮ್ಮ ಮನೆಯ ಹೆಣ್ಣನ್ನು ಹೊರತುಪಡಿಸಿ ಎಂದೇ ಅರ್ಥ. ಒಂದಿಷ್ಟು ಗೆರೆ ದಾಟಿತೆಂದರೆ, ಕ್ರಾಂತಿಕಾರಿ ಮಹಿಳೆಯರ ಮಾತು, ವರ್ತನೆಗಳಲ್ಲೂ ಅವರು ಬಯಸುವುದು ದೇವಮಾತೆಯ ರೂಪವನ್ನೆ....."

ಕೊನೆಯ ಕಥೆ "ಉಪ್ಪು" - ಈ ಕಥೆಯಲ್ಲಿ ಕೇವಲ ಉಪ್ಪಿಗಾಗಿ ಆನೆಯಿಂದ ತುಳಿಸಿಕೊಂಡು ಸಾಯುವ ಮೂವರು ಯುವಕರ ಕಥೆ. ಬಿಟ್ಟಿ ಕೂಲಿಯಿಂದ ಬಿಡುಗಡೆ ಪಡೆಯಲು ಬುಡಕಟ್ಟು ಜನರು ಹೋರಾಟ ನಡೆಸಿ ಯಶಸ್ವಿಯಾಗುತ್ತಾರೆ. ಇದರಿಂದ ಸೋಲು ಅನುಭವಿಸುವ ಸಾಹುಕಾರ ಉತ್ತಮಚಂದ ಸೇಡು ತೀರಿಸಿಕೊಳ್ಳಲು ಜನರಿಗೆ ಉಪ್ಪು ಸಿಗದಂತೆ ಮಾಡುತ್ತಾನೆ. ಇಡೀ ಊರಿಗೇ ಉಪ್ಪನ್ನು ತಂದು ಮಾರುವವ ಅವನೊಬ್ಬನೆ! ಅವನ ನೀಚ ತೀರ್ಮಾನದಿಂದ ಜನ ದಿನೇ ದಿನೇ ಉಪ್ಪಿಲ್ಲದೆ ಸೊರಗುತ್ತಾರೆ. ಅತ್ಯವಶ್ಯವಾದ ಉಪ್ಪು ದೊರಕದೇ ನಿಶ್ಶಕ್ತರಾಗುತ್ತಾರೆ. ತಡೆಯಲಾಗದೆ, ಕೆಲವರು ಉಪ್ಪಿಗಾಗಿ ಹುಡುಕಾಡುತ್ತಾರೆ. ಅರಣ್ಯ ಇಲಾಖೆಯವರು ಜಿಂಕೆ, ಆನೆಗಳಿಗೆಂದು ಉಪ್ಪು ಚೆಲ್ಲುವುದನ್ನು ಕಂಡುಕೊಳ್ಳುತ್ತಾರೆ. ಆನೆಗಳ ಅಪಾಯದ ಅರಿವಿದ್ದರೂ ಬೇರೆ ದಾರಿಯಿಲ್ಲದೆ ಉಪಾಯವಾಗಿ, ಅವುಗಳಿಗೆ ಹಾಕುವ ಉಪ್ಪನ್ನು ಕದಿಯಲು ಶುರು ಮಾಡುತ್ತಾರೆ. ತನ್ನ ಪಾಲಿನ ಉಪ್ಪನ್ನು ಬೇರೆಯವರು ಕದಿಯುತ್ತಿರುವುದನ್ನು ಕಂಡುಕೊಂಡ ಒಂಟಿ ಸಲಗವೊಂದು ಅವರಷ್ಟೇ ಉಪಾಯದಿಂದ ಹಿಂಬಾಲಿಸಿ ಅವರನ್ನು ತುಳಿದು ಸಾಯಿಸುತ್ತದೆ.

ಪೋಲೀಸರು "ಯುವಕರು, ಕುಡಿದು ಮತ್ತರಾಗಿ, ಉಪ್ಪು ಕದಿಯುವ ಕೆಲಸಕ್ಕೆ ಹೋದರು. ಸಸ್ಯಹಾರಿ ಪ್ರಾಣಿಗಳಿಗೆ ಉಪ್ಪು ಅವಶ್ಯಕ. ಅದನ್ನು ಕದಿಯಲು ಶುರು ಮಾಡಿದರೆ ಗತಿ ಏನು? ಕಾಡು ಪ್ರಾಣಿಗಳನ್ನು ರಕ್ಷಿಸುವಲ್ಲಿ ಮಾನವನ ಅತಿಕ್ರಮ ಪ್ರವೇಶ ಎಷ್ಟು ತೊಂದರೆಯಾಗುತ್ತದೆ" ಎಂದು ವಿವರಣೆ ನೀಡುವರು. ನಿಜವಾಗಿಯೂ ನಡೆದ ಬಗ್ಗೆ ವಿವರಣೆ ನೀಡುವ ಚಾರಚಕ್ಷತೆ ಆ ಜನರಿಗಿರಲಿಲ್ಲ. ಬರಿ ಉಪ್ಪಿಗಾಗಿ ಮೂರು ಜೀವಗಳ ಬಲಿ! ಶಸ್ತ್ರಾಸ್ತ್ರಗಳಿಲ್ಲದೇ, ಸುಲಲಿತವಾಗಿ ಮೂರು ದೇಹಗಳ ಬಲಿ ತೆಗೆದುಕೊಂಡ ಉತ್ತಮಚಂದ ಪೋಲೀಸರಷ್ಟೇ ಕ್ರೂರಿ ಎನ್ನುವುದನ್ನು ಲೇಖಕಿ ಮನಸಿಗೆ ನಾಟುವಂತೆ ಹೇಳುತ್ತಾರೆ.

ಮುಗ್ಧ ಜನರ ಬದುಕನ್ನು ತುಳಿಯುವ ಪೋಲೀಸರ, ಹಣವಂತರ ಕಾರ್ಯವನ್ನು ಕತೆಗಳಲ್ಲಿ ಚಿತ್ರಿಸುವ ಮೂಲಕ ಲೇಖಕಿ ನಾವು ಅರಿಯದೇ ಇರುವ ಬದುಕೊಂದನ್ನು ನಮ್ಮ ಮುಂದೆ ತೆರೆದಿಡುತ್ತಾರೆ. ಅಬ್ಬರ, ಸೋಗು ಇಲ್ಲದೆ ಸರಳವಾಗಿ ಆದರೆ ತೀವ್ರವಾಗಿ ಮನ ಮುಟ್ಟುವಂತೆ ಹೇಳುತ್ತಾರೆ. ಇಂತಹ ಲೇಖಕಿಯರನ್ನ ಕನ್ನಡಿಗರಿಗೆ ಪರಿಚಯಿಸಿರುವ ಶ್ರೀಮತಿ ಎಚ್. ಎಸ್. ಅವರು ಅಭಿನಂದನಾರ್ಹರು.

- ಸರಸ್ವತಿ ದು.

ಡಾ. ವಿಜಯಾ ದಬ್ಬೆಯವರ 'ಇತಿ ಗೀತಿಕೆ'

ಸ್ತ್ರೀವಾದದ ಪ್ರತಿಪಾದನೆ

ಡಾ. ಪ್ರಭಾವತಿ

ಚಿಂತನ ಶೀಲ ಲೇಖಿಕಿ ಎಂದೇ ಹೆಸರಾದ ಡಾ. ವಿಜಯಾ ದಬ್ಬೆ, ವೃತ್ತಿಯಿಂದ ಅಧ್ಯಾಪಕಿಯಾಗಿ, ಪ್ರವೃತ್ತಿಯಿಂದ ಸಂಶೋಧಕಿ, ಭಾಷಣಕಾರ್ತಿ, ವಿಮರ್ಶಕಿ, ಕವಯಿತ್ರಿ ಆಗಿ ತಮ್ಮ ಬಹುಮುಖ ಪ್ರತಿಭೆಯಿಂದ ಈಗಾಗಲೇ ಕರ್ನಾಟಕದ ವಿಚಾರವಂತರಿಗೆ, ಸಾಹಿತ್ಯಾಸಕ್ತರಿಗೆ ಚಿರಪರಿಚಿತರಾಗಿದ್ದಾರೆ.

೧೯೭೫ರಲ್ಲೇ "ಇರುತ್ತವೆ" ಎಂಬ ಮೊದಲ ಕವನ ಸಂಕಲನ ಪ್ರಕಟಿಸಿದ ವಿಜಯಾ, ಈ ಸಂಕಲನವನ್ನು ಮೂರನೆಯ ಸಂಕಲನ ಎಂದು ಪ್ರಕಟಿಸದೇ ಮೊದಲೆರಡು ಸಂಕಲನದ ಪದ್ಯಗಳನ್ನೂ ಇದರೊಂದಿಗೇ ಸೇರಿಸಿರುವುದು ಇಲ್ಲಿಯ ಮೊದಲನೇ ವಿಶೇಷ. ಪದ್ಯಗಳನ್ನು ಕಾಲಾನುಸಾರ ಪ್ರಕಟಿಸದೇ ೯೦ರ ಕವನಗಳನ್ನು ಮೊದಲು, ೮೦ರ ಕವನಗಳನ್ನು ನಂತರ, ೭೦ರ ಕವನಗಳನ್ನು ಅನಂತರ ಪ್ರಕಟಿಸುವ ರೀತಿ ಎರಡನೇ ವಿಶೇಷ. ಸಂಕಲನದ ಯಾವ ಪದ್ಯದ ಹೆಸರನ್ನೂ ಪುಸ್ತಕಕ್ಕೆ ಇಡದೇ "ಇತಿ ಗೀತಿಕೆ" (ಅಂದರೆ ಇತಿ=ಹೀಗೆ, ಗೀತಿಕೆ=ಪದ್ಯಗಳು) ಎಂದು ಹೆಸರಿಟ್ಟಿರುವುದು ಮೂರನೇ ವಿಶೇಷ. ಈ ಮೂಲಕ ಅವರು ಎರಡು ಗುರಿಗಳನ್ನು ಸಾಧಿಸುತ್ತಿದ್ದಾರೆನ್ನಿಸುತ್ತದೆ. ಒಂದು, ತಮ್ಮ ಎಲ್ಲಾ ಕವನಗಳನ್ನೂ ಸಹೃದಯರ ಮುಂದೆ ಒಟ್ಟಿಗೇ ತೆರೆದಿಡುವುದು, ಎರಡು, ಹಾಗೆ ತೆರೆದಿಡುವ ಮೂಲಕವೇ ಎಲ್ಲಾ ಕವಿತೆಗಳಿಗೂ ಒಂದು ಹಿನ್ನೋಟವನ್ನು ಕೊಡುವುದು. ಮೂರನೆಯ ಕವನ ಸಂಕಲನವು ಹೀಗೆ ತನಗಿಂತ ಹಿಂದಿನ ಎರಡು ಸಂಕಲನಗಳ ಕವಿತೆಗಳನ್ನು ಒಳಗೊಂಡುದೇಕೆ ಎಂಬ ಕುತೂಹಲವೋ ಚಿಂತೆಯೋ ನಮ್ಮನ್ನು ಕಾಡುವುದು ಸಂಕಲನದ ಪುಟಗಳನ್ನು ತೆರೆಯುವವರೆಗೆ ಮಾತ್ರ, ಒಮ್ಮೆ ತೆರೆದ ನಂತರ ಈ ಯಾವ ಪ್ರಶ್ನೆಯ ಹಂಗೂ ಇಲ್ಲದೇ ನಮ್ಮನ್ನು ಕ್ರಮೇಣ ತನ್ನೊಳಕ್ಕೆ ಎಳೆದುಕೊಂಡು ಬಿಡುವ, ತನ್ನ ಲೋಕದಲ್ಲಿ ತೇಲಾಡಿಸುವ, ತತ್ಕಾಲಕ್ಕಾದರೂ ಈ ಲೋಕವನ್ನು ಮರೆಸುವ, ಅದೇ ಸಮಯಕ್ಕೆ ಚಿಂತನೆಗೆ ಹಚ್ಚುವ ಈ ಕವನಗಳನ್ನು ಓದುವುದೇ ಒಂದು ಆಹ್ಲಾದಕರ ಅನುಭವ ಅನ್ನುವಾಗ ಇವನ್ನೆಲ್ಲಾ ಒಟ್ಟಿಗೆ ತಂದರೇಕೆ ಎಂಬ ಪ್ರಶ್ನೆ ಮಾಯವಾಗಿ ತಂದುದೇ ಒಳಿತಾಯಿತು ಎಂಬ ಧನ್ಯತೆಯ ಭಾವದಲ್ಲಿ ನಾವು ಮುಳುಗುತ್ತೇವೆ.

ಸಹಜವಾಗಿಯೇ, ೭೦ರಲ್ಲಿ ಹೊರ ತಂದ ಕವನಗಳನ್ನು ೯೦ರ ಕವನಗಳಿಗೆ ಹೋಲಿಸಿದರೆ ಹಸಿ ಹಸಿ, ಅಪಕ್ವ ಅನ್ನಿಸುತ್ತದೆ. ೮೦ರ ಕವನಗಳಲ್ಲಿ ದಟ್ಟವಾದ ಛಾಯೆಯಾಗಿ ಆಗತಾನೇ ಬಲಗೊಳ್ಳುತ್ತಿದ್ದ ಸ್ತ್ರೀವಾದ ಹರಡಿದೆ. ಕೇಳುವವರನ್ನು ಮಂತ್ರಮುಗ್ಧಗೊಳಿಸುವ ಭಾಷಣ ಕಲೆಯೇ ಕವಿತಾ ರಚನೆಯಲ್ಲೂ ತಲೆದೋರಿದಾಗ ಪದಗಳು ಇವರ ಕೈಲಿ ಅದ್ಭುತ ಶಕ್ತಿ ಪಡೆಯುತ್ತದೆ. ಉದಾ : 'ಬೆಳಗು' ಪದದ ನಾಮ ಮತ್ತು ಕ್ರಿಯಾರೂಪಗಳನ್ನು ದುಡಿಸಿಕೊಂಡಿರುವ ರೀತಿ. (ಕುಂತಿಯ ಬೆಳಗು)

ಮಲಗಿರುವ ಗುರು
ತೊಡೆ ಕೊರೆತ ರಕ್ತ
ಇಂದ್ರ ಕೀಟದ ಪಂಕ್ತಿ

('ಸಂಯಮ ಗೌರವಕ್ಕೆ ತಕ್ಕ ಬಹುಮಾನ ಕ್ರಿಮಿಕಾಶಿ) ಪದ್ಯದಲ್ಲಿ 'ಗುರು' ಪದವನ್ನು ಮೊದಲ ಸಾಲಿಗೂ ಎರಡನೇ ಸಾಲಿಗೂ ಸಮಾನವಾಗಿ ಎಳೆದುಕೊಂಡಿರುವ ರೀತಿ.

ಪೌರಾಣಿಕ ಘಟನೆಗಳು, ವ್ಯಕ್ತಿಗಳು ಇವರ ಕವನಕ್ಕೆ ವಸ್ತುಗಳಾದಾಗ ಅವಶ್ಯವಾಗಿ ಅವು ಪ್ರತಿಮೆಗಳಾಗಿ ಮಾರ್ಪಡುತ್ತದೆ. ಕೆಲವಂತೂ ಸೊಗಸಾದ ಪ್ರತಿಮೆಗಳು.

"ತಿರುಗಿ ನಿಂತ ಪ್ರಶ್ನೆಗಳು - ರಾಮಾಯಣದ ಸೀತೆಯ ಬಾಳಿನ ಎಲ್ಲಾ ಅವಕಾಶಗಳನ್ನೂ ಇಂದಿನ ಸ್ತ್ರೀಯೊಬ್ಬಳು ವಿಶ್ಲೇಷಿಸುತ್ತಾ ಸೀತೆಯ ಸ್ಥಾನದಲ್ಲಿ ತನ್ನನ್ನೇ ಇಟ್ಟುಕೊಂಡು ಪ್ರಶ್ನಿಸಿಕೊಳ್ಳುವ ತಂತ್ರದ್ದು. "ಅಭಿಮನ್ಯು-ಹಿನ್ನೋಟ" ಅಭಿಮನ್ಯು ಸತ್ತ ಘಟನೆಯನ್ನು ವಿಶ್ಲೇಷಿಸುತ್ತಾ ಅವನನ್ನು ಯಾವುದೋ ಶಕ್ತಿಯೊಂದು ಚಕ್ರವ್ಯೂಹದೊಳಕ್ಕೆ ತಳ್ಳಿತೆ ಎಂದು ಪ್ರಶ್ನಿಸುವ ರೀತಿಯಲ್ಲಿ ಇಂದಿಗೂ ಬದುಕಿನ ಚಕ್ರವ್ಯೂಹಗಳನ್ನು ಪ್ರವೇಶಿಸುವ ಬಾಲ (ಬಾಲಿಕಾ) ಅಭಿಮನ್ಯುಗಳಿಗೆ ಸಂಕೇತ ವಾಗಿಸುವುದು. ಹೆತ್ತ ಮಗನನ್ನು ದೂರ ತಳ್ಳಿ ಮತ್ತೊಮ್ಮೆ ಅವನ ಜೀವವನ್ನೇ ಬಲಿ ಕೇಳುವ ತಾಯಿಯ ದುಃಖವನ್ನು ಚಿತ್ರಿಸುವ "ಕುಂತಿಯ ಬೆಳಗು"ನ ಕುಂತಿ ಇಂಥದೇ ಪರಿಸ್ಥಿತಿಯಲ್ಲಿ ಬೇರೆ ಬೇರೆ ಆಯಾಮದಲ್ಲಿ ನಿಂತ ಸ್ತ್ರೀಯರ ಪ್ರತಿನಿಧಿ.

ಶಂಬುಕರ ಶವಗಳು
ಇತಿಹಾಸದಲ್ಲಿ ಹೂತು ಹೋಗದೇ

ಇಂಡಿಯಾ ಆಫ್ರಿಕಾ ಅಮೆರಿಕೆಯ
ಭೂಪಟದೊಳಗೆ ಕುಣಿದಾಡುತ್ತವೆ (ಶಂಬುಕ)

ಎಂಬ ಸಾಲುಗಳು ರಾಮಾಯಣದ ಶಂಬೂಕ ಪ್ರಸಂಗವನ್ನು ಮತ್ತೆ ಅನಾವರಣಗೊಳಿಸಿ ಸಾರ್ವತ್ರಿಕಗೊಳಿಸುತ್ತವೆ. ಪುರಂದರದಾಸರ ಕೀರ್ತನೆಯ ಒಂದು ಸಾಲು

"ಪೋಗದಿರೆಲೋ ರಂಗ ಬಾಗಿಲಿಂದಾಚೆ"

ಎಂಬುದನ್ನು ಇಪ್ಪತ್ತನೇ ಶತಮಾನದಲ್ಲಿ ದಿನ ಬೆಳಗೆದ್ದರೇ ನಾವು ನೋಡುವ, ಅನುಭವಿಸುವ ಕರ್ಫ್ಯೂಗೆ ಅನ್ವಯಿಸಿ, ವಿನೋದ ಮಾಡುವ, ಅಷ್ಟೇ ಮಟ್ಟಿಗೆ ವಿಷಾದವನ್ನು ಉಂಟು ಮಾಡುವ ಶಕ್ತಿಯಿದೆ.

ಮುಖ ಪುಟದಲ್ಲಿರುವ ಗಂಜೀಫಾ ರಘುಪತಿ ಭಟ್ಟರ ಸರಳವಾದ ರೇಖಾ ಚಿತ್ರ (ಚಂದ್ರನಿಗೆ ಕೈ ನೀಡಿರುವ ಸ್ತ್ರೀ) ವಿಜಯಾರವರ ಕಾವ್ಯ ಪ್ರತಿಮೆಗಳಿಗೇ ಸಂಕೇತವಾಗಿದೆ ಎಂದು ಹೇಳಿದರೆ ಬಹುಶಃ ಅರ್ಧ ಸತ್ಯ ಹೇಳಿದಂತೆ. ಏಕೆಂದರೆ, ಪ್ರತಿಮೆಗಳನ್ನು ಹೊಸೆಯುವ ತವಕ ಅತಿಯಾಗಿ, ಪದಗಳು, ವಾಕ್ಯಗಳು ತೀರಾ ಸಂಗ್ರಹಗೊಂಡಾಗ, ವಾಚ್ಯತೆಯನ್ನು ತಪ್ಪಿಸುವ ಅತಿ ಆತಂಕದಲ್ಲಿ ಕಾವ್ಯದ ಸಾಲುಗಳು ಎಚ್ಚರ ವಹಿಸಿದಾಗ ಸಂವಹಿಸಿ ಕಷ್ಟ ಸಾಧ್ಯವಾಗುವುದೂ ಉಂಟು. ಉದಾ : ನೀವು, ಕಾಳಿದಾಸನ ಇಕ್ಕಟ್ಟು,

ಶೆಲ್ಲಿಯ ರಕ್ತ
ಮುಳ್ಳ ತುದಿಯಲ್ಲಿ
ರೇಶಿಮೆಯ ಚೌಕ
ತಂತಿ ಬೇಲಿಯ ಸಿಕ್ಕಿನಲ್ಲಿ (ಆದರೂ)

ಸ್ತ್ರೀವಾದಿ ಲೇಖಕಿಯರಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ವಿಜಯಾ ದಬ್ಬೆಯವರ ಕವಿತೆಗಳಲ್ಲಿ ಸ್ತ್ರೀವಾದದ ಪ್ರತಿಪಾದನೆ ತೀವ್ರವಾಗಿ, ಸಂಕ್ಷಿಪ್ತವಾಗಿ ಒಡಮೂಡಿದೆ. ಬಟ್ಟೆ ಎಸೆದ ಅಕ್ಕನಿಗೆ ಅವಳದೇ ತಲೆಗೂದಲ ಬಟ್ಟೆ ತೊಡಿಸಿ ಅವಳಿಗಿರುವಷ್ಟೂ ಧೈರ್ಯವಿಲ್ಲದ ಹೇಡಿಗಳು ನಾವು ಎಂದುಕೊಳ್ಳುವಾಗ (ಧನ್ಯೆ) ರಾವಣ ದುಶ್ಶಾಸನರು ಮತ್ತೆ ಹುಟ್ಟಿ ನಮ್ಮನ್ನು ಅಪಹರಿಸಿ ಸೀರೆ ಎಳೆದರೂ ಹೆದರುವುದು ಬೇಡ ರಾಮಕೃಷ್ಣರಿದ್ದಾರೆ ಎನ್ನುತ್ತಾ ಇಂದಿಗೂ ಸ್ತ್ರೀಯರು ಪುರುಷರನ್ನೇ ಅವಲಂಬಿಸಿರುವುದಕ್ಕೆ ವ್ಯಂಗ್ಯವಾಡುತ್ತಾ (ನಾರೀಮಣಿಗಳಿಗೆಂದು ಕಿವಿಮಾತು) ಹಿಮಾಲಯ ಪರ್ವತದ ಮಣಿಕರ್ಣಿಕಾ ಘಟ್ಟದ ಬಿಸಿ ನೀರ ಬುಗ್ಗೆಗಳು ಪಾರ್ವತಿಯ ಬಗ್ಗೆ ಶಿವನಿಗಿರುವ ಪ್ರೀತಿಯನ್ನು ವ್ಯಕ್ತಪಡಿಸುತ್ತವೆ ಎಂದು ನಿಟ್ಟುಸಿರಿಡುತ್ತಾ (ಸತೀ ಪ್ರೀತಿ) ಸ್ತ್ರೀವಾದದ ದಟ್ಟವಾದ ಪ್ರತಿಪಾದನೆ ಒಡಮೂಡಿದೆ.

ಕೇವಲ ಪೌರಾಣಿಕ ಘಟನೆಗಳು ಮಾತ್ರವಲ್ಲ, ಸಾಮಾಜಿಕ ಸಂದರ್ಭಗಳು ಅನಿಸಿಕೆಗಳೂ ಇವರ ಕೈಯಲ್ಲಿ ಪ್ರತಿಮೆಗಳಾಗುತ್ತವೆ. ಜನಿವಾರ ಧರಿಸಿ ಕ್ರಾಂತಿಯ ಮಾತಾಡುವ ಗಂಡ, ಹೆಂಡತಿಯ ಕೈಲಿ ಸೇವೆ ಮಾಡಿಸಿಕೊಳ್ಳುವ ಸೋಶಿಯಲಿಸ್ಟ್ ಪಕ್ಷದ ಕಾರ್ಯದರ್ಶಿ ಹೆಂಡತಿಗೆ ಕೊಡುವುದೇನು?

ಅವನೇನು ಕೃತಘ್ನನಲ್ಲ
ಸಧ್ಯದಲ್ಲೆ ಬಂದೀತು
ಅವಳಿಗರ್ಪಿಸಿದ ಕವನ ಸಂಕಲನ (ಪ್ರಗತಿ)
ಹೆಣ್ಣು ಹುಟ್ಟಿದ್ದೇಕೆ ಎಂಬ ಭಾವನೆ ಕಾಡಿದಾಗ
ಗೂಡನು ಕಟ್ಟಿ ಗುಟುಕನು ಇಕ್ಕಿ
ಹಾರಲು ಬಿಡಲೇ ಹುಟ್ಟಿದೆವೆ,
ಮಡಿಕೆ ಕುಡಿಕೆಗಳ ಒಡೆತನದುಬ್ಬಲಿ
ಮಣ್ಣಲಿ ಹೊರಳಲೆ ಹುಟ್ಟಿದೆವೆ?
ದ್ವೈತಾದ್ವೈತರೇ ಹಾರುವ ಭೂಪರ
ಕಾಲೊತ್ತಲಿಕಷ್ಟೆ ಹುಟ್ಟಿದೆವೆ?
ಶೇಷಶಾಯಿಯ ಕಾಲಬುಡದಲಿ
ಕೂಡಲಿಕಷ್ಟೆ ಹುಟ್ಟಿದೆವೆ (ಇಷ್ಟಕೆ ಹುಟ್ಟೆ?)
ಎಂದು ಪ್ರಶ್ನಿಸುತ್ತಾರೆ.

ಏಷ್ಯಾದ ಉಜ್ವಲಾ ಇಡೀ ಜಗತ್ತನ್ನೇ ದೋಣಿಯಲ್ಲಿ ಕುಳಿತು ಹುಟ್ಟು ಹಾಕುತ್ತಾ ಸುತ್ತಿ ಬಂದ ಹೆಣ್ಣು. ಅವಳು ಮುಂಬಯಿಗೆ ಬಂದಾಗ ಅಂದಿನ ಮಹಾರಾಷ್ಟ್ರದ ಮುಖ್ಯಮಂತ್ರಿ ಅವಳಿಗೆ ಪುಷ್ಪಗುಚ್ಛ ಕೊಟ್ಟರು. ಅವಳು ಅದನ್ನು ಎಡಗೈಲಿ ಸ್ವೀಕರಿಸಿದಾಗ ಮುಖ್ಯಮಂತ್ರಿಯ ಹುಬ್ಬು ಗಂಟಿಕ್ಕಿದಂತೆ. ಅವಳೇಕೆ ಎಡಗೈಲಿ ಸ್ವೀಕರಿಸಿದಳು. ಬಲಗೈ ಏನು ಮಾಡುತ್ತಿತ್ತು. ಅಂದರೆ

ಹುಟ್ಟು ಹಾಕಿದ್ದು ದೋಣಿ ಸರಿ ಮಾಡಿದ್ದು
ಎಲ್ಲ ಎಲ್ಲ ಎಡಗೈಯಿಂದಲ್ಲವೆ?
ಯಾವಾಗ ಯಾವಾಗ ಆ ಬಲಗೈ
ಸೌಟು ಬಟ್ಟಿತ್ತು, ಬಿಡಲಾಯಿತು ಹೇಳಿ.
(ಮುಖ್ಯಮಂತ್ರಿಯ ಹುಟ್ಟು)

ಕೆಲವು ಸೂಚ್ಯವಾದ ಲೈಂಗಿಕ ಪ್ರತಿಮೆಗಳು, ಸೂಕ್ಷ್ಮ ಕೆಳದನಿಯ ಕಾವ್ಯವೇ ಇವರ ವೈಶಿಷ್ಟ್ಯ ಎಂಬ ಶಾಂತಿನಾಥ ದೇಸಾಯಿಯವರ ಬೆನ್ನುಡಿಯ ಮಾತಿಗೆ ಸಾಕ್ಷಿ ನುಡಿಯುತ್ತವೆ. (ಅವನಿಲ್ಲದ ಮೇಲೆ, ಅದೇ ವೃತ್ತ)

ಕನ್ನಡ ವಿಚಾರ ಸಾಹಿತ್ಯಕ್ಕೆ ತಮ್ಮ ವಿದ್ವತ್ಪೂರ್ಣ ಭಾಷಣಗಳಿಂದ, ಒಳ್ಳೆಯ ಕೊಡುಗೆ ನೀಡಿರುವ ವಿಜಯಾ, ತಮ್ಮ ಕವಿತೆಗಳಿಂದ ಕನ್ನಡ ಕಾವ್ಯಲೋಕಕ್ಕೂ ಅಷ್ಟೇ ಒಳ್ಳೆಯ ಕೊಡುಗೆ ನೀಡಿದ್ದಾರೆ. ಆದರೆ, ಚಿಂತನೆಯಿಂದ ಕೊಂಚ ದೂರ ಸರಿದು ಕಲಾತ್ಮಕತೆಗೆ ಒತ್ತು ಕೊಟ್ಟರೆ ಕವಿತೆಗೆ ಒಳ್ಳೆಯದೇನೋ ಎಂಬ ಮಾತನ್ನು ಈ ಸಂಕಲನ ನೋಡಿದ ನಂತರ ನಿರ್ವಿವಾದವಾಗಿ ಹೇಳಬಹುದು.

ರೋಬೋಟ್

ತೆಲುಗಿನಿಂದ ಕನ್ನಡಕ್ಕೆ : ಕೆ. ನಾರಾಯಣಸ್ವಾಮಿ
ಗೌರಿಬಿದನೂರು.

ರೋಬೋಟ್
ಮಾರಾಟಕ್ಕಿದೆ ರೋಬೋಟ್
ಆಜೀವಪರ್ಯಂತ ಗ್ಯಾರಂಟಿ
ಚಿನ್ನದ ಬಣ್ಣದ ಸಜೀವ ವಿಗ್ರಹ
ಮನೆಗೇ ಬೆಳಕು
ಬಯಸಿದ್ದೇ ತಡ
ಕ್ಷಣ ಮಾತ್ರದಲ್ಲಿ ಷಡ್ರುಚಿಗಳು ಪ್ರತ್ಯಕ್ಷ

ಬಂಧು ಮಿತ್ರರಿಗೆ ಮುಗುಳ್ನಗೆಯ ಆತಿಥ್ಯ
ಬಟ್ಟೆ ಒಗೆದು ಇಸ್ತ್ರೀ ಮಾಡುತ್ತೆ
ಮನೆ ಸದಾ ಕಂಗೊಳಿಸುವ ಮುತ್ತು

ಬೆಳಗ್ಗೆ ಬೀಳ್ಕೊಡುತ್ತೆ
ಸಂಜೆ ಸ್ವಾಗತಿಸುತ್ತೆ
ಅದೆಷ್ಟೆಷ್ಟೋ ಸುಖ ನೀಡುತ್ತೆ
ವಂಶವೃಕ್ಷ ಬೆಳೆಸಿ ಪೋಷಿಸುತ್ತೆ

ಹಠ ಮಾಡಿದಲ್ಲಿ ಥಳಿಸಿದರೆ ಸಾಕು ಕೆನ್ನೆಗೆ
ಕಿಲುಬು ತೊಲಗಿ ಮತ್ತೆ ಕೆಲಸ ಮಾಡುತ್ತೆ
ಪೆಟ್ರೋಲ್ ಖರ್ಚು ಎನ್ನುವಿರಾ?
ಹೊತ್ತಿಗೆ ಹಿಡಿಯಷ್ಟು ತುತ್ತು ಸಾಕು.

ಅಂದವಾಗಿ ಅಲಂಕರಿಸುವಿರಾ?
ನಿಮ್ಮ ಅಂತಸ್ತಿಗೆ ತಕ್ಕಂತೆ ನಿಲ್ಲುತ್ತೆ
ಹೋಂ ವರ್ಕ್‌ಗಳನ್ನು ಮಾಡಿಟ್ಟು
ಮಕ್ಕಳನ್ನು ಇಂಜಿನಿಯರ್, ವೈದ್ಯರನ್ನಾಗಿ ತಯಾರು ಮಾಡುತ್ತೆ

ಅದೆಷ್ಟೊಂದು ಲಾಭ
ಸುಮ್ಮ ಸುಮ್ಮನೆ ಹೇಳುತ್ತಿಲ್ಲ
ಖಚಿತವಾದುದು, ಬಾಳಿಕೆ ಬರುವಂಥಾದ್ದು
ಬೆಲೆ ಮೈನಸ್ ಲಕ್ಷ
ಚೌಕಾಶಿ ಮಾಡಬಹುದು
ಆಗಾಗ್ಗೆ ಬಂಗಾರದ ಮೊಟ್ಟೆಗಳು
ದುರಾಶೆಯಿಂದ ಸಾಯಿಸಿದರೂ
ಆತ್ಮಹತ್ಯೆ ಚೀಟಿ ತಾನೇ ಬರೆದಿಟ್ಟಿರುತ್ತೆ.

(ಅಶ್ವಿನಿ ಥೊಂಗ್ಡೆ ಅವರ 'ಎಮಿಷೀನ್' ಕವಿತೆಯ ಆಧಾರದಿಂದ ತೆಲುಗಿಗೆ ಎಸ್. ಜಯ ಅವರ ಸ್ವೇಚ್ಛಾನುವಾದ)

ಕಣ್ಮರೆಯಾದವರ ಕತೆ

ಮಹೇಶ್ವರಿ ಯು.

ಬಹುಶಃ ಹೆಚ್ಚಿನವರು ಖನೆಯ ಕತೆಯನ್ನು ಕೇಳಿರಲಾರರು. ಲೋಪಾಮುದ್ರೆ, ವಿಶ್ವಮಾ, ಮೈತ್ರೇಯಿ ಮೊದಲಾದ ಪ್ರಾಚೀನ ವಿದುಷಿಯರ ಸಾಲಿನಲ್ಲಿ ಮೆರೆಯತಕ್ಕ ಇವಳ ಕತೆ ಅಭಿಮಾನವುಕ್ಕಿಸುವ ಸತ್ವವುಳ್ಳದ್ದೂ ಹೌದು. ವ್ಯಥೆಯ ಕತೆಯೂ ಹೌದು. ಜ್ಯೋತಿಷ್ಯಾಸ್ತ್ರದಲ್ಲಿ ಕುತೂಹಲಿಗಳೂ ಪಾರಂಗತರೂ ಆದ ಗಂಡ ಹೆಂಡಿರು ಮಿಹಿರ ಹಾಗೂ ಖನೆ. ಮಾವ ವರಾಹ ಕೂಡ ಜ್ಯೋತಿಷ್ಯಾಸ್ತ್ರದಲ್ಲಿ ನಿಪುಣನಾಗಿದ್ದು ವಿಕ್ರಮಾದಿತ್ಯನ ಆಸ್ಥಾನದಲ್ಲಿ ಪಂಡಿತನಾಗಿದ್ದ. ಒಮ್ಮೆ ಆಕಾಶದಲ್ಲಿ ಒಟ್ಟಿಗೆ ಎಷ್ಟು ನಕ್ಷತ್ರಗಳೆಂಬ ಪ್ರಶ್ನೆ ವಿಕ್ರಮಾದಿತ್ಯನದು. ಬಹಳ ಕ್ಲಿಷ್ಟವಾದ ಈ ಪ್ರಶ್ನೆಗೆ ವರಾಹನ ಬಳಿ ಉತ್ತರವಿಲ್ಲ. ರಾಜಸಭೆಯಲ್ಲಿ ಅವಮಾನಿತನಾದ ಆತ ಮನೆಗೆ ಬಂದರೆ ಬಾಡಿದ ಮೋರೆಯ ಮಾವನನ್ನು ನೋಡಿ ಕಾರಣ ತಿಳಿದು ಖನೆ ಉತ್ತರ ಹೇಳುತ್ತಾಳೆ. ವರಾಹ ಆ ಉತ್ತರವನ್ನು ರಾಜಸಭೆಯಲ್ಲಿ ತಿಳಿಸಿದರೆ ರಾಜನಿಗೆ ಅಷ್ಟರಿಂದಲೆ ತೃಪ್ತಿ ಇಲ್ಲ. ಇಷ್ಟು ಕ್ಲಿಷ್ಟ ಪ್ರಶ್ನೆಗೆ ಉತ್ತರ ಕಂಡು ಹಿಡಿದ ಬಗೆ ಹೇಗೆ ಅಂದರೆ ಅಪಾರವಾಗಿರುವ ನಕ್ಷತ್ರಗಳ ಸಂಖ್ಯೆಯನ್ನು ಗೊತ್ತು ಹಚ್ಚಿದ ವಿಧಾನ ಯಾವುದೆಂಬ ಕುತೂಹಲ. ಆದರೆ ವರಾಹನ ಬಳಿ ಅದಕ್ಕೇನು ಉತ್ತರವಿದೆ? ಆತ ನಿರುಪಾಯನಾಗಿ ಸೊಸೆಯ ಹೆಸರನ್ನು ಹೇಳುತ್ತಾನೆ. ರಾಜ ಆಕೆಯ ವಿದ್ವತ್ತಿಗೆ ಮೆಚ್ಚಿ 'ದಸಮರತ್ನ'ವೆಂಬ ಗೌರವದ ಸ್ಥಾನ ಕೊಡಬೇಕೆಂಬ ಅಭಿಪ್ರಾಯವನ್ನು ಪ್ರಕಟಿಸುತ್ತಾನೆ. ವರಾಹನಿಗೆ ಇದು ನುಂಗಲಾರದ ತುತ್ತು. ಸೊಸೆ ರಾಜಸಭೆಯಲ್ಲಿ ಕುಳಿತು ಕೊಳ್ಳುವುದೆಂದರೆ! ಮಾತ್ಸರ್ಯ ಮತ್ತು ಅಹಂನಿಂದ ಕುದಿದು ಕೊನೆಗೆ ಖನೆಯ ನಾಲಿಗೆಯನ್ನು ಕೊಯಿಸುವ ಕ್ರೂರ ಆಲೋಚನೆಯನ್ನು ಆತ ಮಾಡುತ್ತಾನೆ. ನಾಲಿಗೆಯಿಲ್ಲದೆ ಆಕೆ ರಾಜಸಭೆಗೆ ಬರಲಾರಳು ಬಂದರೂ ತನ್ನ ಪ್ರತಿಭೆಯನ್ನು ಬೆಳಗಲಾರಳು! ವರಾಹನು ಮಗನಿಗೆ ಆ ಕೆಲಸವನ್ನು ಹೇಳಿದ. ಪಿತೃವಾಕ್ಯ ಪರಿಪಾಲಕನಾಗಿ ಮಿಹಿರ ಶಸ್ತ್ರ ಹಿಡಿದು ಖನೆಯ ಬಳಿಗ ಬಂದಾಗ ಆಕೆ ಸಿದ್ಧಳಾದವಳಂತೆ ವ್ಯಂಗ್ಯವಾಡಿದಳು - "ನನ್ನ ದೈವವನ್ನು ನಾನು ಗಣಿತದಿಂದ ಮೊದಲೇ ತಿಳಿದಿದ್ದೇನೆ, ತಾವೇನೂ ಅನುಮಾನ ಪಡಬಾರದು. ಹಣೆಬರಹವು ತಪ್ಪಲಾರದು" ಖನೆ ನಾಲಗೆಯನ್ನು ಹೊರ ಚಾಚಿದಳು. ಮಿಹಿರ ಅದರ ಮೇಲೆ ಶಸ್ತ್ರವನ್ನು ಎಳೆದ. ಇದು ಖನೆಯ ಕತೆಯಾದರೆ ಇನ್ನೊಬ್ಬಾಕೆ ವೈಜಯಂತಿ ವಿದ್ವಾಂಸನ ಮಗಳಾಗಿ ಪ್ರತಿಭಾವಂತೆಯಾದ ಈಕೆ ಪಂಡಿತನಾಗಿದ್ದ ಕೃಷ್ಣನಾಥನ ಪತ್ನಿಯಾಗುತ್ತಾಳೆ. ಆದರೆ ತನ್ನ ಕುಲ ಮರ್ಯಾದೆಗೆ ತಕ್ಕವಳಲ್ಲವೆಂಬ 'ಅಹಂ'ನಿಂದ ಹೆಂಡತಿಯನ್ನು ತವರಿನಲ್ಲೇ ಬಿಟ್ಟಿದ್ದ ಕೃಷ್ಣನಾಥ - ಈಕೆ ವಿದ್ಯಾ ವ್ಯಾಸಂಗಕ್ಕೆ ಮನವೋತು ಅದನ್ನು ಮುಂದುವರಿಸುತ್ತಲಿದ್ದರೂ ನೆರೆಹೊರೆಯವರ ಅವಹೇಳನ ಭರ್ತ್ಸನೆಯ ನುಡಿಗಳನ್ನು ತಾಳಲಾರದೆ ತನ್ನ ಕಷ್ಟಗಳನ್ನು ಕವಿತಾ ರೂಪದಲ್ಲಿ ಗಂಡನಿಗೆ ನಿವೇದಿಸಿ ಕೊಳ್ಳುತ್ತಾಳೆ. ಆಗ ಆತನಿಗೆ ಜ್ಞಾನೋದಯವಾಗಿ ಪಶ್ಚಾತ್ತಾಪ ವಾಗುತ್ತದೆ. ಹೀಗೆ ಅವಳನ್ನು ಕರೆತಂದರೆ, ಗೃಹಿಣಿ ಯಾಗಿದ್ದಾಗಲೂ ಬಿಡುವಿನ ವೇಳೆಯಲ್ಲಿ ವ್ಯಾಸಂಗವನ್ನು ಮಾಡುತ್ತಾಳೆ. ಕೃಷ್ಣನಾಥನ ಬಳಿ ವಿದ್ಯಾರ್ಜನೆ ಮಾಡುವ ಎಷ್ಟೋ ಮಂದಿ ಶಿಷ್ಯರಿದ್ದರು. ಒಂದು ದಿನ ಆತ ಅನ್ನಾಹಾರಗಳ ಪರಿವೆಯಿಲ್ಲದೆ ಒಂದು ವಾಕ್ಯವನ್ನು ಪದಚ್ಛೇದ ಮಾಡಲು ಎಷ್ಟು ಯತ್ನಿಸಿದರೂ ವಿಫಲನಾಗಿ ಕಂಗೆಟ್ಟಿದ್ದ. ಊಟಕ್ಕಾಗಿ ಅವನನ್ನು ಕರೆದ ಈಕೆ ಆ ವಾಕ್ಯ ಯಾವುದೆಂದು ಪತ್ತೆ ಮಾಡಿಬಿಟ್ಟಿದ್ದಳು. ಗಂಡ ಉಂಡು ಮಲಗಿದಾಗ ಸದ್ದಿಲ್ಲದೆ ಪುಸ್ತಕ ತೆಗೆದು ಆ ವಾಕ್ಯವನ್ನು ಸರಳವಾಗಿ ಬಿಡಿಸಿ ಬರೆದಳು. ಪುಸ್ತಕವನ್ನು ಮೊದಲಿದ್ದಂತೆ ಇಟ್ಟು ಬಿಟ್ಟಳು. ಗಂಡ ಮಲಗೆದ್ದು ನೋಡುತ್ತಾನೆ - ಇದು ಹೆಂಡತಿಯ ಜಾಣ್ಮೆ ಎಂದು ಬಹಿರಂಗವಾದಾಗ ಅಭಿಮಾನವೇನೋ ಮೂಡುತ್ತದೆ. ಆದರೆ ನೋವಿನ ವಿಚಾರವೆಂದರೆ ಕವಯತ್ರಿಯಾದ ವೈಜಯಂತಿ ಸ್ವತಃ ರಚಿಸಿದ ಶ್ಲೋಕಗಳಿದ್ದರೂ ಆಕೆಯ ಹೆಸರಿನಲ್ಲಿ ಇಲ್ಲ. "ಆನಂದ ಲತಿಕಾ ಚಂಪೂ" ಎಂಬ ಕೃತಿ ರಚನೆಯಲ್ಲಿ ಗಂಡ ಕೃಷ್ಣನಾಥನ ಜೊತೆ ಆಕೆಯ ಸಹಭಾಗಿತ್ವವಿದ್ದರೂ ಆಕೆಯ ಹೆಸರಿನ ಉಲ್ಲೇಖವಿಲ್ಲ. "ಭಾರತೀಯ ವಿದುಷಿಯರ ಪರಂಪರೆಯನ್ನು ಪರಿಚಯಿಸುವ ಲೇಖಕ ಎಮ್.ಪಿ. ಪೂಜಾರರು ಹೇಳುತ್ತಾರೆ - "ಆ ಕಾಲದಲ್ಲಿ ಹೆಂಗಸರ ಹೆಸರನ್ನು ಪ್ರಚಾರಗೊಳಿಸುವ ಪದ್ಧತಿಯಿರಲಿಲ್ಲ"

ಖನೆ ಹಾಗೂ ವೈಜಯಂತಿಯರ ಈ ಬಗೆಯ ಕತೆಗಳನ್ನು ಓದಿದ ಬಳಿಕ ಅನಿಸುತ್ತದೆ - ಕಣ್ಮರೆಯಾದ ಲೇಖಕಿಯರ ವಿದ್ವನ್ಮಣಿಗಳ ಪರಂಪರೆಯಲ್ಲಿ ಇಂತಹ ಎಷ್ಟೋ 'ಕಣ್ಮರೆ ಮಾಡಲ್ಪಟ್ಟ' ಪ್ರತಿಭೆಗಳು ಇದ್ದೂ ಇಲ್ಲದಾಗಿರಬಹುದಲ್ಲವೇ ಎಂದು.

ಆಕರ: ಭಾರತೀಯ ವಿದುಷಿಯರು - ಎಮ್. ಪಿ. ಪೂಜಾರ - 1914

ಪ್ರ : ವಾಗ್ಭೂಷಣ ಗ್ರಂಥಮಾಲೆ.

ದ್ರೌಪದಿ ಒಂದು ಅನಿಸಿಕೆ

ಸ್ತ್ರೀ ಸ್ವಾತಂತ್ರ, ಸಮಾನತೆಯ ಸಂವೇದನೆಯುಳ್ಳ ಹಲವಾರು ಲೇಖಕರು ಹಾಗೂ ಲೇಖಕಿಯರನ್ನು ಮಹಾಭಾರತದ ದ್ರೌಪದಿ ಪಾತ್ರ ಒಂದು ವಿಶಿಷ್ಟ ಪಾತ್ರವಾಗಿ ಕಾಡಿರುವುದಲ್ಲಿ ಆಶ್ಚರ್ಯವಿಲ್ಲ. ಅಂತೆಯೇ ಲೇಖಕರು ಹಾಗೂ ಲೇಖಕಿಯರು ದ್ರೌಪದಿಯನ್ನು ಕತೆ, ಕಥನ, ನಾಟಕ, ಕಾದಂಬರಿಯ ವಸ್ತುವನ್ನಾಗಿಸಿಕೊಂಡಿರುವುದನ್ನು ನೋಡಬಹುದು. 'ದ್ರೌಪದಿ' ಡಾ. ಎಸ್. ವಿ. ಪ್ರಭಾವತಿಯವರ ಇತ್ತೀಚಿಗೆ ಪ್ರಕಟವಾದ ಕಾದಂಬರಿ. ದ್ರೌಪದಿಯೇ ಈ ಕಾದಂಬರಿಯ ನಾಯಕಿ. ಮಹಾಭಾರತದ ಘಟನೆಗಳನ್ನು, ವ್ಯಕ್ತಿಗಳನ್ನು ಸ್ವಂತ ದೃಷ್ಟಿಕೋನದಿಂದ ನೋಡುತ್ತಾಳೆ. ಯುದ್ಧ ಭೂಮಿಯ ಮಕ್ಕಳ ಸಾವಿನೆದುರಿನಲ್ಲಿ ದ್ರೌಪದಿ ಸಿಂಹಾವಲೋಕನದ ಮೂಲಕ ತನ್ನ ದೃಷ್ಟಿಕೋನವನ್ನು ಬಿಚ್ಚಿಡುತ್ತಾಳೆ.

ಯಾವುದೇ ವಿಷಯವನ್ನು ದ್ರೌಪದಿ ಇದ್ದದನ್ನು ಇದ್ದಾಗೆ ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು ಎಂಬ ಮಾತಿನಂತೆ ಅವಳು ವರ್ತಿಸುತ್ತಾ, ಭೀಷ್ಮನ ಮೇಲೆ ಸೇಡು ತೀರಿಸಿಕೊಳ್ಳಲು ಅಂಬೆ ಅಗ್ನಿಗೆ ಆಹುತಿಯಾಗಿ ಶಿಖಂಡಿಯಾಗಿ ಜನಿಸಿದ್ದು ಅವನ ಮೇಲೆ ಸೇಡು ತೀರಿಸಿಕೊಳ್ಳಲು ಸರಿಯೆಂದು ದ್ರೌಪದಿ ಭಾವಿಸುತ್ತಾಳೆ. ಸ್ವಯಂವರದಲ್ಲಿ ಗೆದ್ದು ತಂದ ಅವಳನ್ನು ಧರ್ಮರಾಯನೋ, ಕುಂತಿಯೋ, ತಂದೆಯೋ ಸೌಜನ್ಯಕ್ಕಾದರೂ ಸರಿ "ದ್ರೌಪದಿ, ನಿನಗೆ ಇಂತಹ ಮದುವೆ ಸಮ್ಮತವೆ? ಐದು ಜನರನ್ನು ವರಿಸಲು ನೀನು ಸಿದ್ಧಳಿರುವೆಯಾ" ಎಂದು ಎಲ್ಲರೆದುರು ಚರ್ಚೆಯಾಗುವಾಗ ಒಂದು ಮಾತು ಒಂದೇ ಒಂದು ಕೇಳಿದ್ದರೂ ಸಾಕಿತ್ತು. ನನಗೆ ಧನ್ಯತೆಯ ಭಾವ ಮೂಡುತ್ತಿತ್ತು. ಈ ಮೇಲಿನ ಮಾತುಗಳನ್ನು ಆಲಿಸಿದಾಗ ರಾಜಕುಮಾರಿಯಾದ ಅವಳಿಗೆ ಸಾಮಾನ್ಯ ಸ್ತ್ರೀಗೂ ಯಾವುದೇ ವ್ಯತ್ಯಾಸವಿಲ್ಲದೆ ಮನೆಯವರ ದಬ್ಬಾಳಿಕೆಗೆ ಗುರಿಯಾಗಿ ಇಷ್ಟವಿಲ್ಲದನ್ನು ಇಷ್ಟವಿದೆಯೆಂದು ಪರಿಸ್ಥಿತಿಯ ಒತ್ತಡದಿಂದ ಎಲ್ಲವನ್ನು ಸಹಿಸಿಕೊಳ್ಳುವ ಸಾಮಾನ್ಯ ಸ್ಥಿತಿಯ ಪರಿಸ್ಥಿತಿ ರಾಜಕುಮಾರಿಯಾದ ದ್ರೌಪದಿಗೆ ಒದಗಿ ಬಂದಾಗ ಇನ್ನು ಸಾಮಾನ್ಯರ ಪಾಡು ಏನು? ಎಂದು ಚಿಂತಿಸಿ ಸತ್ತ ಮಕ್ಕಳನ್ನು ಕಂಡು ದುಃಖಿಸುವ ಅವಳು ನಿಜಕ್ಕೂ ತನ್ನ ಚಿಂತೆಯಿಂದ ಆಧುನಿಕ ಮನೋಭಾವವನ್ನು ಹೊಂದಿರುವಳು ಎಂದು ತಿಳಿಯುತ್ತದೆ.

ತನ್ನ ಮದುವೆಗೆ ಸಂಬಂಧಪಟ್ಟಂತೆ ದೈವದ ಕಥೆಯನ್ನು ಸೇರಿಸಿ ಋಷಿ ನೀಡಿದ ಉದಾಹರಣೆ ಇವಳಿಗೆ ಸರಿ ಕಾಣಲಿಲ್ಲ. ತಾನು ಈಗಾಗಲೇ ಆ ಐವರನ್ನು ಮೆಚ್ಚಿರುವುದು ಆ ದಿವ್ಯಜ್ಞಾನಿಗಳಿಗೆ ತಿಳಿದಿಲ್ಲವೆಂಬ ವ್ಯಂಗ್ಯದ ನಗೆಯನ್ನು ಬೀರಿದಳು.

ಕುಂತಿ ಹೆಣ್ಣಾಗಿದ್ದರೂ ಧರ್ಮದ ನೆಪದಲ್ಲಿ ಐವರನ್ನು ಮದುವೆಯಾದ, ದ್ರೌಪದಿ ಅವಳ ಮಕ್ಕಳನ್ನು ಸಂತೋಷ ಪಡಿಸಿದ್ದಾಯಿತು. ತನಗೆ ನೋವಿದ್ದರೂ ನಂತರ ಮಕ್ಕಳಿಗೆ ಅಪಾಯ ಒದಗುವುದನ್ನು ಲೆಕ್ಕಿಸದೆ ಹೆಂಡತಿಯನ್ನು ಬಿಟ್ಟು ತಮ್ಮ ಪ್ರಾಣ ರಕ್ಷಿಸಿಕೊಳ್ಳಲು ಹೊರಟ ಗಂಡಂದಿರನ್ನು ನೆನೆದು ತಿರಸ್ಕಾರ ಭಾವ ಮೂಡಿರುವುದು ಹೆಚ್ಚು ಸಮಂಜಸ.

ನಿಮ್ಮನ್ನು ಪಗಡೆಯಾಟದಲ್ಲಿ ಗೆದ್ದ ಒಡೆಯರು "ಅಂದೆ" ಏನಂದೆ? ಪಗಡೆಯಾಟದಲ್ಲಿ ನನ್ನನ್ನು ಗೆದ್ದನೆ? ನಾನೇನು. ಭೂಮಿ ಕಾಣಿಯೆ ಗೆಲ್ಲಲು? ನನ್ನ ವಿಚಾರವನ್ನು ನಾನೇ ಮಾಡಬಲ್ಲ ಸಶಕ್ತ ಸ್ತ್ರೀ". "ಅದು ಸರಿ ಭೂಮಿಕಾಣಿಯಲ್ಲಿ ಗೆದ್ದ ಮೇಲೇ ನಿಮ್ಮನ್ನು ಗೆದ್ದರು".

ಏನು ಗೆದ್ದ, ಹೇಗೆ ಗೆದ್ದ? ವಿವರವಾಗಿ ಹೇಳು" "ಧರ್ಮರಾಯ ಮೊದ ಮೊದಲು ಸಾವಿರ ಕುದುರೆ, ಸಾವಿರ ರಥ, ಸಾವಿರ ಆನೆ, ಸಾವಿರ ದಾಸಿಯರು ಎಲ್ಲವನ್ನು ಒಡ್ಡಿ ಸೋತರು"

"ಅನಂತರ!

ಅನಂತರ ತಮ್ಮ ತಮ್ಮಂದಿರನ್ನೆಲ್ಲ ಒಬ್ಬೊಬ್ಬರನ್ನಾಗಿ ಒಡ್ಡಿ ಸೋತರು...."

"ಏನೆಂದೆ ತಮ್ಮಂದಿರನ್ನು ಒಡ್ಡಿದನೆ? ಛಿ ಛೀ"

"ತಮ್ಮಂದಿರನ್ನು ಒಡ್ಡಿ ಸೋತರು. ಅನಂತರ ತಮ್ಮನ್ನೇ ಒಡ್ಡಿಕೊಂಡು ಸೋತರು.... ಅನಂತರ ನಿಮ್ಮನ್ನು ಒಡ್ಡಿದ.. ಸೋತರು. ಆದ್ದರಿಂದ ದಾಸಿಯಂತೆ ಕಸ ಗುಡಿಸಬೇಕಂತೆ"

ದ್ರೌಪದಿ ಇದನ್ನು ಕೇಳಿ ಸಿಟ್ಟಿನಿಂದ ಸ್ತ್ರೀಗೆ ಇರಬೇಕಾದ ಸ್ವಾತಂತ್ರ್ಯದ ಹಕ್ಕಿನಿಂದ ಅವಳು ಕೇಳಿಕೊಳ್ಳುವ ಪ್ರಶ್ನೆಗಳು ಇಂದಿಗೂ ಪ್ರಸ್ತುತವಾಗಿ ಕಾಡುತ್ತದೆ. ಈ ಭೂಮಿಯ ಮೇಲಿರುವ ಸಕಲ ಆಸ್ತಿ ಪಾಸ್ತಿಗಳನ್ನು ಜೂಜಾಡಿ ಕಳೆದುಕೊಳ್ಳುವರಿರ

ಬಹುದು, ಆದರೆ ಹೆಂಡತಿಯನ್ನು ಪಣವೊಡ್ಡಿ ಕಳೆದುಕೊಳ್ಳುವವರು ಯಾರಾದರೂ ಇದ್ದಾರೆಯೇ? ಆ ಮಹಾ ಮೂರ್ಖನನ್ನು ಬಿಟ್ಟು ಮತ್ತೆ ಅಂದುಕೊಳ್ಳುತ್ತಿರುವಾಗ ಏನೋ ಹೊಳೆಯಿತು. ಮತ್ತೆ ದಾಸಿಯನ್ನು "ಎಲೈ ಪ್ರಾತಿಗ್ಗಾಮಿ, ಹೋಗಿ ಆ ಜೂಜುಗಾರನನ್ನು ಕೇಳಿಕೊಂಡು ಬಾ ಅವನು ಮೊದಲು ತನ್ನನ್ನು ಒಡ್ಡಿಕೊಂಡು ಸೋತನೋ ಅಥವಾ ನನ್ನನ್ನು ಒಡ್ಡಿ ಸೋತನೊ?

"ಹಾಗೆಂದರೇನು?"

"ಹಾಗೆಂದರೆ, ಅವನು ಮೊದಲೇ ತನ್ನನ್ನು ಒಡ್ಡಿಕೊಂಡು ಬಿಟ್ಟಿದ್ದರೆ ಅವನಿಗೆ ನನ್ನನ್ನು ಒಡ್ಡಲು ಹಕ್ಕಿಲ್ಲ. ಹಾಗಿದ್ದರೆ ನಾನು ರಾಜಸಭೆಗೆ ಬರುವುದಿಲ್ಲ".

ಧರ್ಮದ ನೆಪ ಹೊಡ್ಡಿ ತನ್ನನ್ನು ಜೂಜಿನಲ್ಲಿ ಸೋತ ಗಂಡನ ವಿರುದ್ಧ ತನ್ನ ಪ್ರತಿಭಟನೆಯನ್ನು ಸಭೆಯಲ್ಲಿ ಮಂಡಿಸುವ ದ್ರೌಪದಿ ನಿಜಕ್ಕೂ ಆಧುನಿಕ ಹೆಣ್ಣಾಗಿ ತನ್ನ ಹಕ್ಕನ್ನು ತಾನು ಕಾಪಾಡಿಕೊಳ್ಳುವ ರೀತಿ ಸಮಂಜಸವಾಗಿದೆ.

"ಅಂಬೆಯ ನೆನಪಾಗುತ್ತಿದೆಯಲ್ಲವೆ? ಅವಳ ಸ್ಥಾನದಲ್ಲಿ ನಾನಿದ್ದಿದ್ದರೆ ಅಸಹಾಯಳಾಗಿ ಅಗ್ನಿ ಪ್ರವೇಶ ಮಾಡುತ್ತಿರಲಿಲ್ಲ. ಬದಲಿಗೆ ನಿಮ್ಮನ್ನೇ ಅಗ್ನಿಗೆ ನೂಕುತ್ತಿದ್ದೆ" ಈ ಮಾತು ತಾವು ಸುಖವಾಗಿರುವ ಪುರುಷರ ವಿರುದ್ಧ ಅವಳು ಕೈಗೊಳ್ಳುವ ತೀರ್ಮಾನ ಸರಿಯೆಂದು ಒಪ್ಪಬಹುದು.

ದ್ರೌಪದಿ ಕೇಳುವುದು ಅಂಬೆಯನ್ನು ಮದುವೆಯಾಗಿಯೋ, ಅಂಬಿಕೆ, ಅಂಬಾಲಿಕೆಯರಿಗೆ ಪುತ್ರದಾನ ಮಾಡಿಯೋ ನೀವು ಸಿಂಹಾಸನದ ಮೇಲೆ ನಿಮ್ಮ ಹಕ್ಕನ್ನು ಚಲಾಯಿಸಿದ್ದಿದ್ದರೆ, ಈ ಧೃತರಾಷ್ಟ್ರನಂಥವನೂ ಹುಟ್ಟಬೇಕಿರಲಿಲ್ಲ. ದುರ್ಯೋಧನಂಥವನೂ ಹುಟ್ಟಬೇಕಿರಲಿಲ್ಲ. ಸ್ವಯಂವರದಲ್ಲಿ ಗೆದ್ದು ತಂದ 'ಅಂಬೆಯನ್ನು ನ್ಯಾಯವಾದ ರೀತಿಯಲ್ಲಿ ವಿವಾಹವಾಗಿದ್ದರೆ, ಅಂಬಿಕ, ಅಂಬಾಲಿಕೆಗೆ ಪುತ್ರದಾನ ಮಾಡುವ ಈ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ. ಒಂದು ಹೆಣ್ಣಿಗೆ ಅನ್ಯಾಯವೆಸಗಿದ ಕಾರಣಕ್ಕಾಗಿಯೇ ಭೀಷ್ಮ ಈ ಎಲ್ಲವನ್ನೂ ನೋಡಬೇಕಾಗಿ ಬಂತು ಎಂಬ ದ್ರೌಪದಿ ಅಭಿಪ್ರಾಯ ಸಮ್ಮತವಾಗಿದೆ.

ಅವಳಿಗೆ ಮಾನಭಂಗ ಮಾಡುತ್ತಿರುವಾಗ ಗಂಡಂದಿರಿಗೆ ಇವಳು ಹೆಂಡತಿ ಎಂಬ ಭಾವ ಬರಲಿಲ್ಲ. ಆದ್ದರಿಂದಲೇ ರಕ್ಷಿಸುವ ಕರ್ತವ್ಯ ಅವರಿಗೆ ಉಳಿಯಲಿಲ್ಲ. ಹಾಸಿಗೆಯಲ್ಲಿ ಸುಖಿಸುವಾಗ ಮಾತ್ರ ಅವಳು ಅವರಿಗೆ ಹೆಂಡತಿಯಾಗಿರಬೇಕು.

ದ್ರೌಪದಿ ಅರ್ಜುನನ ಬಗ್ಗೆ ಯೋಚಿಸತೊಡಗಿದಳು. ಅರ್ಜುನನಿಗೆ ಅಭಿಮನ್ಯು ಮಾತ್ರ ಮಗನೆ? ಶ್ರುತ, ಕೀರ್ತಿ, ಮಗನಲ್ಲವೇ? ಈ ಭೀಮನೋ ಘಟೋತ್ಕಜನನ್ನು ನನ್ನ ಮಗ ಎನ್ನುವಂತೆ ಶ್ರುತ ಸೋಮರನ್ನು ಒಂದು ಬಾರಿಯೂ ಮಗನೆಂದವನಲ್ಲ. "ದ್ರೌಪದೀ ಹೊರಡು ಧರ್ಮರಾಯ ಆಡಿದ ಪಣದಂತೆ ನೀನು ನಮ್ಮೊಂದಿಗೆ ವನವಾಸ ಮಾಡಬೇಕು. ಆದರೆ ಪ್ರತಿವಿಂಧ್ಯನಿಗೆ ಐದು ವರ್ಷ, ಉಳಿದವರೆಲ್ಲಾ ಅವನಿಗಿಂತ ಒಂದೊಂದು ವರ್ಷ ಚಿಕ್ಕವರೂ ಐದು ಜನಕ್ಕೂ ಮಕ್ಕಳ ಮೇಲೆ ಗಮನವೇ ಇಲ್ಲ ತಾಯಿ ಹೇಳಿದಳೆಂದು ನನ್ನನ್ನು ಸುಖಿಸಿ ಮಕ್ಕಳನ್ನು ಹುಟ್ಟಿಸಿದ ಇವರು ಈಗ....... ಇಂದು ನನ್ನ ಮಕ್ಕಳನ್ನು..... ಸೂಳೆಗೆ ಹುಟ್ಟಿದವರಂತೆ, ಹಾದರಕ್ಕೆ ಹುಟ್ಟಿದವರಂತೆ....... ದುಃಖ ಉಕ್ಕಿ ಬಂತು.

"ಮಕ್ಕಳು........ ಮಕ್ಕಳನ್ನು ಕರೆದೊಯ್ಯುವುದಿಲ್ಲವೆ?" ಎಂದು ಅಳುವನ್ನು ತಡೆಯುತ್ತಾ ಕೇಳಿದೆ.

ಗಂಡಂದಿರಿದ್ದ ಇವಳು ಗಂಡಂದಿರಿಲ್ಲವೆಂದೂ ಭಾವಿಸಿಕೊಳ್ಳುವ ಪರಿಸ್ಥಿತಿ. ಮಕ್ಕಳಿಗೆ ತಂದೆಯರಿದ್ದು ಅವರು ಇನ್ಯಾರಿಗೂ ಹುಟ್ಟಿದವರೆಂಬ ಭಾವವನ್ನು ಕಂಡ ಅವಳಿಗೆ ಮನಸ್ಸಿನಲ್ಲಿ ಅಗಾಧವಾದ ನೋವಾಯಿತು. ಕಡೆಗೆ ಅರ್ಜುನ ಯಾವ ಮಕ್ಕಳು?" ಎಂದಾಗ ಅವಳಿಗಾದ ವೇದನೆ ಇನ್ನು ತೀವ್ರವಾದದ್ದು.

ಭೀಮ ತಮ್ಮ ಮಗ ಘಟೋತ್ಕಜ ಸತ್ತಾಗ ಅವನು ದುಃಖಿಸುವುದು ನೋಡಿ ದ್ರೌಪದಿಗೆ ಅಸೂಯೆ ಉಂಟಾಯಿತು ಕಾರಣ ದ್ರೌಪದಿ ಮಗ ಶ್ರುತ ಸೋಮನನ್ನು ಒಮ್ಮೆಯೂ 'ನನ್ನ ಮಗ' ಅನ್ನದ ಅವನ ಬಗ್ಗೆ ಒಂದು ಕ್ಷಣ ಮನಸ್ಸು ಕೆರಳಿದರೂ ಇನ್ನೊಂದು ಕ್ಷಣದಲ್ಲಿ ಅವನನ್ನು ಸಂತೈಸುತ್ತಿದ್ದಳು.

ಮಕ್ಕಳನ್ನು ಸುಡಲು ಚಿತೆ ತಯಾರದಾಗ ಭೀಮ ಬೆಂಕಿಯಿಡಿದು ಪ್ರದಕ್ಷಿಣೆ ಬರುತ್ತಿದ್ದ. ಉಳಿದವರು ನಿಂತಿದ್ದರೂ ಆಗ, ದ್ರೌಪದಿ ಭೀಮನಿಂದ ಬೆಂಕಿಯನ್ನು ಕಸಿದುಕೊಂಡು ಹೇಳಿದಳು, "ಬೇಡ, ನಾನೇ ಅಗ್ನಿಸ್ಪರ್ಶ ಮಾಡುವೆ ಇವರು ನನ್ನ ಮಕ್ಕಳು..... ನನ್ನ ಮಕ್ಕಳು ಮಾತ್ರ ಇಲ್ಲ, ಇವಳ ನಿಲುವು ನಿಜಕ್ಕೂ ಸಾಮಾಜಿಕವಾಗಿ ಗಮನಾರ್ಹ ತಂದೆಯರಿದ್ದರೂ ಒಂದು ದಿನವೂ ಪ್ರೀತಿ ತೋರದ ಅವರನ್ನು ಕಂಡು ಜಿಗುಪ್ಸೆ ಮೂಡಿ ಈ ನಿರ್ಧಾರ ಕೈಗೊಂಡಳು.

ದ್ರೌಪದಿಯ ಬದುಕಿನ ಕಥೆಯನ್ನು ಒಂದು ದುರಂತ ಕಥೆಯೆಂದು ಒಪ್ಪಿಕೊಂಡರೆ ತಪ್ಪಿಲ್ಲ. ಈ ಕಾದಂಬರಿಯಲ್ಲಿ ಮೊದಲಿನಿಂದಲೂ ಕಡೆಯವರೆಗೂ ಅವಳ ಪಾತ್ರದಲ್ಲಿ ಅವಳು ವರ್ತಿಸುವ ರೀತಿ ಹಾಗು ಆಲೋಚಿಸುವ ವಿಧಾನವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಒಬ್ಬ ಆಧುನಿಕ ಮಹಿಳೆಯ ಮನೋಭಾವದ ದೃಷ್ಟಿ ಅವಳಲ್ಲೂ ಕಂಡುಬರುತ್ತದೆ ಎಂಬ

ಮಾತು ಸತ್ಯವಾಗಿ ಕಾಣುತ್ತದೆ. ಅವಳ ವಿರುದ್ಧ ನಡೆಯುವ ಶೋಷಣೆಯನ್ನು ಪ್ರತಿಭಟಿಸಿದರೂ ಅವಳಿಗೆ ನೆಮ್ಮದಿಯ ಬದುಕು ಸಾಧ್ಯವಾಗಲಿಲ್ಲ. ಅದೇ ಸೀತೆ ಪ್ರತಿಭಟಿಸಿದೆ ಎಲ್ಲ ಕಷ್ಟ ಅನುಭವಿಸಿದರೂ ಅಲ್ಲೂ ಅವಳೂ ಗೆಲುವನ್ನು ಕಾಣಲಿಲ್ಲ. ಒಟ್ಟಿನಲ್ಲಿ ಪುರುಷ ಪ್ರಧಾನ ಸಮಾಜ ಸ್ತ್ರೀಗೆ ಇರಬಹುದಾದ, ಪ್ರಾಥಮಿಕ ಸ್ವಾತಂತ್ರ್ಯವನ್ನು ನೀಡುವಲ್ಲಿಯೂ ತಾರತಮ್ಯವನ್ನುಂಟು ಮಾಡುತ್ತದೆ. ಇನ್ನು ಮುಂದಾದರೂ ನಾರಿಯೇ ಆಲೋಚನೆಗಳಿಗೆ ಒಂದು ಬೆಲೆ, ಒಂದು ಸ್ಥಾನ ಅವಕಾಶ ನೀಡಿದ್ದಾರೆಂದರೇ ಸುಂದರ ಸಮಾಜ ರೂಪಗೊಳ್ಳುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಹೆಣ್ಣನ್ನು ಎಲ್ಲಾತರದ ವಿಷಯಗಳಲ್ಲಿಯೂ ಮುಂದೆ ಬರಲು ಪ್ರೋತ್ಸಾಹಿಸಬೇಕು. ಅವಳ ಆಸೆ, ಆಕಾಂಕ್ಷೆಗಳಿಗೂ ಬೆಲೆ ಕೊಟ್ಟು ಅವಳ ಮನಸ್ಸನ್ನು ಅರ್ಥ ಮಾಡಿಕೊಂಡು ಅವಳು ಮುಂದೆ ಬರಲು ಬಿಟ್ಟರೆ ಖಂಡಿತವಾಗಿಯೂ ಆ ಸ್ತ್ರೀ ಈ ನಮ್ಮ ರಾಜ್ಯವನ್ನು ರಾಮರಾಜ್ಯ ಮಾಡಬಲ್ಲಳು, ಇದರಲ್ಲಿ ಯಾವುದೇ ಸಂಶಯವೇ ಇಲ್ಲ.

ದ್ರೌಪದಿ ಕೇವಲ ಪುರಾಣದ ಒಂದು ಪಾತ್ರವಾಗಿ ನಮ್ಮ ಕಣ್ಣೆದುರಿಗೆ ನಿಲ್ಲುವುದಿಲ್ಲ. ಅವಳ ಸ್ವಂತ ವ್ಯಕ್ತಿತ್ವ, ಮಹಾಭಾರತದ ಘಟನೆಗಳನ್ನು ನೋಡುವ ರೀತಿ, ಕರ್ಣ, ಅವಳ ಐವರು ಗಂಡಂದಿರು, ಕುಂತಿ, ದುರ್ಯೋಧನ, ಭೀಷ್ಮ, ಕೃಷ್ಣ ಮುಂತಾದವರನ್ನು ನೋಡುವ ರೀತಿಯಲ್ಲಿ ತನ್ನ ಸ್ವಂತಿಕೆಯ ಛಾಪನ್ನು ಒತ್ತುತ್ತಾಳೆ. ಈ ಕಾದಂಬರಿಯಲ್ಲಿ ದ್ರೌಪದಿ ನಮ್ಮೊಳಗಿದ್ದಾಳೆನಿಸುತ್ತದೆ. ನಮ್ಮ ಮೂಲಕ ಮಾತನಾಡುವ ದ್ರೌಪದಿ ಆಧುನಿಕ ಸ್ತ್ರೀಯ ಪ್ರತಿರೂಪದಂತಿದ್ದಾಳೆ.

- *ಉಮಾ*

ಅಮ್ಮ - ಅಪ್ಪ

ತೆಲುಗುಮೂಲ : ಸಿ. ಸೃಜನವಾರ್ಧಿ
ಕನ್ನಡಕ್ಕೆ : ಕೆ. ನಾರಾಯಣಸ್ವಾಮಿ, ಗೌರಿಬಿದನೂರು

“ಅಮ್ಮ ಹೆಚ್ಚೊ? ಅಪ್ಪ ಹೆಚ್ಚೊ?”
“ಅಮ್ಮಾನೆ ಹೆಚ್ಚು ಟೀಚರ್”
“ಹೇಗೆ? ಹೇಳಿ ನೋಡೋಣ”
“ಅಮ್ಮ ಚೆನ್ನಾಗಿ ಸ್ನಾನ ಮಾಡಿಸಿ, ಬಟ್ಟೆ ತೊಡಿಸಿ ಸ್ಕೂಲಿಗೆ ಕಳುಹಿಸುತ್ತಾಳೆ”
“ಅನ್ನ ಮಾಡಿ, ಸಾರು ಮಾಡಿ, ಹೊಟ್ಟೆ ತುಂಬ ಇಡುತ್ತಾಳೆ”
“ಮೈ ತೊಳೆದು, ಮುಖ ತೊಳೆದು, ಒಳ್ಳೆಯ ನೀತಿ ಕಥೆ ಹೇಳುತ್ತಾಳೆ, ತಪ್ಪು ಮಾಡಿದರೆ ದಂಡಿಸಿ ನಮ್ಮನ್ನು ಒಳ್ಳೆಯ ದಾರಿಯಲ್ಲಿ ನಡೆಸುತ್ತಾಳೆ”
“ಉದ್ಯೋಗ ಮಾಡಿ, ಖರ್ಚು ಮಾಡದೆ ಹಣವನ್ನೆಲ್ಲಾ ಮನೆಗೇ ತರುತ್ತಾಳೆ”
“ಸಿಗರೇಟ್ ಕುಡಿಯುವುದಿಲ್ಲ, ಕ್ಲಬ್ಬಿನಲ್ಲಿ ಆಡುವುದಿಲ್ಲ, ಮದ್ಯ ಎಂದರೇನೇ ಅಸಹ್ಯ”
“ಯಾವಾಗಲೂ ಮನೆಯಲ್ಲಿಯೇ ಇರುತ್ತಾಳೆ. ಬೇಕಾದಷ್ಟು ಆಟದ ವಸ್ತುಗಳನ್ನು ತರುತ್ತಾಳೆ. ನಮ್ಮೊಡನೆ ಸೇರಿ ಆಟಗಳಾಡಿ ನಮಗೆ ಆನಂದ ಹಂಚುತ್ತಾಳೆ”
“ಅಪ್ಪಾನೆ ಹೆಚ್ಚು ಟೀಚರ್”
“ಹೇಗೆ? ಹೇಳು”

“ಅಪ್ಪ ಉದ್ಯೋಗ ಮಾಡದಿದ್ದರೂ ಕುಡಿದು-ಆಡಿ ಕುಪ್ಪಳಿಸಿದರೂ, ನಮ್ಮನ್ನು ವಿಚಾರಿಸದಿದ್ದರೂ, ಅಮ್ಮ ಅಪ್ಪನ ಮಾತನ್ನೇ ಕೇಳುತ್ತಾಳಲ್ಲವೆ? ಅಪ್ಪನಿಗೆ ಭಕ್ತಿಯಿಂದ ಸೇವೆ ಮಾಡುತ್ತಾಳಲ್ಲವೆ? ಅಪ್ಪ ಎಂದರೆ ಭಯ ಕೂಡಾ. ಆದ್ದರಿಂದ ಅಪ್ಪಾನೆ ಹೆಚ್ಚು”.

ಭಾರತದ ಮಹಿಳೆಯರ ಸ್ಥಾನಮಾನ - ಒಂದು ಅವಲೋಕನ

ಒಂದು ಸಮಾಜದ ಮಹಿಳೆಯರ ಸ್ಥಾನಮಾನ ಆ ಸಮಾಜದ ಸ್ಥಾನಮಾನವನ್ನು, ಬದಲಾವಣೆಯನ್ನು ಪ್ರತಿಬಿಂಬಿಸುತ್ತದೆ (ಸೂಚಿಸುತ್ತದೆ). ನಮ್ಮ ಸಮಾಜವನ್ನು ತೆಗೆದುಕೊಂಡರೆ ಇಲ್ಲಿ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಎರಡನೆ ದರ್ಜೆಯ ಅಥವಾ ಇನ್ನೂ ಕೆಳಮಟ್ಟದ ಸ್ಥಾನವನ್ನು ಹೊಂದಿದ್ದಾರೆ. ವಿಶ್ವಸಂಸ್ಥೆಯ ವರದಿ ತಿಳಿಸಿರುವಂತೆ ಭಾರತದಲ್ಲೂ ಮಹಿಳೆಯರು ದೇಶದ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟಿದ್ದಾರೆ. ಮೂರನೆ ಎರಡು ಭಾಗದಷ್ಟು ದುಡಿಯುತ್ತಿದ್ದಾರೆ. ಆದರೆ ದೇಶದ ಹತ್ತನೇ ಒಂದರಷ್ಟು ಭಾಗದ ಆದಾಯವನ್ನು ಪಡೆದರೆ, ನೂರನೆ ಒಂದು ಭಾಗದಷ್ಟು ಆಸ್ತಿಯನ್ನು ಮಾತ್ರ ಹೊಂದಿದ್ದಾರೆ. ಇತ್ತೀಚೆಗೆ ಭಾರತದಲ್ಲಿ ಮಹಿಳೆಯರ ಸಂಖ್ಯೆಯು ಕಡಿಮೆಯಾಗುತ್ತಿದ್ದು, ಸೆಕ್ಸ್ ರೇಶಿಯೋ ಕೂಡ ಇಳಿಮುಖವಾಗುತ್ತಿದೆ (೧೦೦೦ ಪುರುಷರಿಗೆ ೯೨೭ ಮಹಿಳೆಯರಿದ್ದಾರೆ).

ಕೆಲವು ಅಂಕಿ ಅಂಶಗಳ ಮೂಲಕ ನಾವು ಮಹಿಳೆಯರ ಸ್ಥಾನವನ್ನು ಗುರುತಿಸಬಹುದು. ಒಟ್ಟು ದುಡಿಯುವವರ ಜನರಲ್ಲಿ ಶೇಕಡ ೨೩ರಷ್ಟು ಮಹಿಳೆಯರಿದ್ದಾರೆ. ಅದರಲ್ಲಿ ಶೇಕಡ ೯೪ರಷ್ಟು ಮಹಿಳೆಯರು ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಉಳಿದ ಶೇ. ೬ರಷ್ಟು ಮಹಿಳೆಯರು ಸಂಘಟಿತ ಕ್ಷೇತ್ರದಲ್ಲಿದ್ದಾರೆ. ಸರ್ಕಾರದ ಆಡಳಿತ ಕ್ಷೇತ್ರದ ಉನ್ನತ ಹುದ್ದೆಗಳಲ್ಲಿ ಶೇ. ೫.೮ರಷ್ಟಿದ್ದರೆ, ಪಾರ್ಲಿಮೆಂಟ್‌ನಲ್ಲಿ ಶೇ. ೬.೬ರಷ್ಟು ಮಹಿಳೆಯರಿದ್ದಾರೆ. ಶೇ. ೩.೩ರಷ್ಟು ಮಹಿಳಾ ನ್ಯಾಯಧೀಶರುಗಳಿದ್ದಾರೆ. ಸಾಕ್ಷರತೆ ತೆಗೆದುಕೊಂಡರೆ ಪುರುಷ ಮತ್ತು ಮಹಿಳೆಯರ ನಡುವಿನ ಸಾಕ್ಷರತೆ ಅಂತರ ದೊಡ್ಡದಾಗುತ್ತಿದ್ದು ಅದು ಶೇ. ೧೫ರಷ್ಟಿದೆ. (ಪುರುಷ ಸಾಕ್ಷರತೆ ೬೩.೩೮೧, ಮಹಿಳೆಯರದು ಶೇ. ೩೯.೪೨).

ಈಗಲೂ ನಮ್ಮ ಸಮಾಜದ ಸಾಮಾಜಿಕ ಸಾಂಸ್ಕೃತಿಕ ನೀತಿ ನಿಯಮಗಳು ಮಹಿಳೆಯರ ಸ್ಥಾನಮಾನವನ್ನು ನಿರ್ಧರಿಸುತ್ತವೆ. ಸಮಾಜವು ಪುರುಷ ಪ್ರಧಾನ ವ್ಯವಸ್ಥೆಯ ಹಿಡಿತದಲ್ಲಿದ್ದು, ಮಹಿಳೆಯರ ಮೇಲೆ, ಆಸ್ತಿ, ಆದಾಯ, ವಿವಾಹ, ನಡವಳಿಕೆ ಕುರಿತಂತೆ ಅನೇಕ ನಿರ್ಬಂಧನೆಗಳನ್ನು ಹೇರಿದೆ. ಇತ್ತೀಚಿನ ಆಧುನೀಕರಣ ತಾಂತ್ರಿಕ ಬದಲಾವಣೆ, ಹೊಸ ಆರ್ಥಿಕ ನೀತಿ, ಕಾನೂನಿನ ಬದಲಾವಣೆ, ಸಮೂಹ ಮಾಧ್ಯಮಗಳ ಪ್ರಭಾವದಿಂದ ಮಹಿಳೆಯರ ಸ್ಥಾನಮಾನದಲ್ಲಿ ಸ್ವಲ್ಪ ಮಟ್ಟಿಗೆ ಬದಲಾವಣೆ ಕಂಡುಬರುತ್ತಿದ್ದರೂ, ಮೂಲಭೂತ ಬದಲಾವಣೆ ಕಂಡು ಬರುತ್ತಿಲ್ಲ. ಅವರ ಸ್ಥಾನಮಾನ ಉತ್ತಮಗೊಂಡಿಲ್ಲ. ಅದರಲ್ಲೂ ಗ್ರಾಮೀಣ ಮತ್ತು ಬಡ ಮಹಿಳೆಯರ ಪರಿಸ್ಥಿತಿ ಹೆಚ್ಚು ಕಡಿಮೆ ಹಾಗೆ ಇದೆ, ಅಥವಾ ಇನ್ನೂ ಹೆಚ್ಚು ಹದಗೆಡುತ್ತಿದೆ. ವಿವಿಧ ಸಂಸ್ಥೆಗಳಲ್ಲಿ ಉದಾ- ಕುಟುಂಬ, ಸಮಾಜ, ಶಿಕ್ಷಣ, ಆರೋಗ್ಯ ಮತ್ತು ಪೌಷ್ಠಿಕತೆ, ರಾಜಕೀಯದಲ್ಲಿ ಅವರ ಸ್ಥಿತಿ ಸುಧಾರಿಸಿಲ್ಲ. ಇದಕ್ಕೆ ಮುಖ್ಯ ಕಾರಣ, ಮಹಿಳೆಯರ ಅನಕ್ಷರತೆ, ಪುರುಷ ಪ್ರಧಾನತೆಯ ಮನೋಭಾವ, ಮಹಿಳೆಯರ ಸಮಸ್ಯೆಗಳ ಬಗ್ಗೆ ಇರುವ ಉದಾಸೀನತೆ, ನಿರ್ಧಾರ ಕೈಗೊಳ್ಳುವಲ್ಲಿ, ನೀತಿ ನಿಯಮಗಳನ್ನು ನಿರ್ಮಿಸುವವರಲ್ಲಿ ಮಹಿಳಾ ಪರ ದೃಷ್ಟಿಕೋನವಿಲ್ಲದಿರುವುದು, ಮತ್ತು ಇಂತಹ ಕಡೆ ಮಹಿಳೆಯರ ಸಂಖ್ಯೆ ಕಡಿಮೆಯಿರುವುದು ಮತ್ತು ಸಮಾಜ ಮಹಿಳೆಯರ ಮೇಲೆ ಹೇರಿರುವ ನಿರ್ಬಂಧನೆಗಳು.

ವಿವಿಧ ಸಂಸ್ಥೆಗಳಲ್ಲಿ ಮಹಿಳೆಯರ ಸ್ಥಾನಮಾನ ಹೇಗಿದೆ, ನೋಡೋಣ. ಮೊದಲಿಗೆ ಕುಟುಂಬವನ್ನು ತೆಗೆದುಕೊಂಡರೆ, ಇಲ್ಲಿ ಪಿತೃ ಸಂತತಿಯ ಪದ್ಧತಿಯಿದ್ದು, ಅಧಿಕಾರ, ಆಸ್ತಿ, ಸಂಪತ್ತು ಎಲ್ಲವೂ ತಂದೆಯಿಂದ ಮಗನಿಗೆ ಬರುತ್ತದೆ. ಪುರುಷನೇ ಕುಟುಂಬದ ಯಜಮಾನನಾಗಿರುತ್ತಾನೆ. ಆದರೆ ಇತ್ತೀಚಿನ ನಗರಗಳಲ್ಲಿ ಸಣ್ಣ ಕುಟುಂಬಗಳು ಹೆಚ್ಚಾಗುತ್ತಿದ್ದು ಅಲ್ಲಿ ಮಹಿಳೆಯರಿಗೆ ಸ್ವಲ್ಪ ಮಟ್ಟಿಗೆ ಸಮಾನ ಸ್ಥಾನ ಸಿಗುತ್ತಿದೆ. ನಗರದ ಉದ್ಯೋಗಸ್ತ ಮಹಿಳೆಯರ ಕೆಲಸದ ಹೊರೆ ಹೆಚ್ಚಾಗುತ್ತಿದ್ದು, ಅವರು ಮೂರು ರೀತಿಯ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮನೆಕೆಲಸ, ಉತ್ಪಾದನೆ ಮತ್ತು ಪುನರುತ್ಪಾದನಾ ಕೆಲಸಗಳಿಂದ ಅವರ ಕೆಲಸದ ಹೊರೆ ಹೆಚ್ಚಾಗುತ್ತಿದೆ.

ಅನೇಕ ಕುಟುಂಬಗಳಲ್ಲಿ ಮಹಿಳೆಯರು ಹೆಂಡತಿಯರಾಗಿ, ತಾಯಂದಿರಾಗಿ, ಅಡಿಗೆ ಮಾಡುವುದು, ಮಕ್ಕಳನ್ನು ಹೆರುವುದು, ಬಟ್ಟೆ ಒಗೆಯುವುದು ಪಾತ್ರೆ ತೊಳೆಯುವುದು ಮತ್ತು ಇತರ ಮನೆಕೆಲಸಗಳಲ್ಲಿ ತೊಡಗಿ, ಅಧಿಕಾರ ಸಂಪತ್ತು ಪ್ರತಿಷ್ಠೆ

ತರುವಂತ ಕೆಲಸಗಳಿಂದ ಹೊರ ಹಾಕಲ್ಪಟ್ಟಿದ್ದಾರೆ. ಹಳ್ಳಿಗಳಲ್ಲೂ ಮಹಿಳೆಯರು ಸೌದೆ ನೀರು ತರುವುದು, ಮಕ್ಕಳನ್ನು ನೋಡಿಕೊಳ್ಳುವುದು ಮತ್ತು ಜಮೀನು ಕೆಲಸವನ್ನು ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಅವರು ಎಷ್ಟರ ಮಟ್ಟಿಗೆ ಮನೆಕೆಲಸಗಳಲ್ಲಿ ತೊಡಗಿದ್ದಾರೆ ಎಂದರೆ ಅವರಿಗೆ ಹೊರಗಿನ ಪ್ರಪಂಚದ ಸಂಪರ್ಕ ಇಟ್ಟುಕೊಳ್ಳುವುದಕ್ಕಾಗಲಿ, ರಾಜಕೀಯವನ್ನು ಪ್ರವೇಶಿಸುವುದಕ್ಕಾಗಲಿ, ಅಥವಾ ಇನ್ಯಾವುದೆ ಚಟುವಟಿಕೆಗಳಲ್ಲಾಗಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಕುಟುಂಬಕ್ಕಾಗಿ ಇಷ್ಟೆಲ್ಲ ಕೆಲಸ ಮಾಡಿದರು ಅವರಿಗೆ ಕೆಲವು ಪ್ರಮುಖ ವಿಷಯಗಳಲ್ಲಿ ನಿರ್ಧಾರ ಕೈಗೊಳ್ಳುವ ಅಧಿಕಾರವಿರುವುದಿಲ್ಲ. ಉದಾ : ಮಕ್ಕಳೆಷ್ಟು ಬೇಕು, ಆಸ್ತಿ ಎಷ್ಟಿರಬೇಕು, ಯಾರ ಹೆಸರಿನಲ್ಲಿರಬೇಕು, ಹೊರಗೆ ಕೆಲಸ ಮಾಡಬೇಕೋ ಬೇಡವೊ, ರಾಜಕೀಯ ಸೇರಬೇಕೊ ಬೇಡವೋ, ಮಕ್ಕಳ ಮದುವೆ, ಮುಂತಾದ ವಿಷಯಗಳಲ್ಲಿ ಮಾತಾಡುವುದಕ್ಕೆ ಅಥವಾ ನಿರ್ಧಾರ ಕೈಗೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಕುಟುಂಬದ ಸದಸ್ಯರೊಂದಿಗೆ ಮತ್ತು ಇತರರೊಂದಿಗೆ ಅವಳ ಸಂಬಂಧ ನಡವಳಿಕೆ ಹೇಗೆ ಇರಬೇಕು ಎಂದು ನಿರೀಕ್ಷಿಸಲಾಗುತ್ತದೆ. ನಮ್ಮ ಧರ್ಮ ಸಂಸ್ಕೃತಿಗಳೂ ಅದನ್ನೆ ಬೆಂಬಲಿಸುತ್ತವೆ. ನಮ್ಮ ಹಳೆಯ ಪರಂಪರೆಯನ್ನು ಅನುಸರಿಸಿಕೊಂಡು ಹೋಗುತ್ತಿರುವುದರಿಂದ, ಜನರಲ್ಲಿ ಮೇಲುವರ್ಗದ ಸ್ಥಾನವನ್ನು ಪಡೆಯುವುದಕ್ಕೋಸ್ಕರ ಹೆಚ್ಚುತ್ತಿರುವ ಹಣದ ವ್ಯಾಮೋಹದಿಂದ ಮತ್ತು ಕಾನೂನಿನ ಲೋಪದೋಷಗಳಿಂದ, ಕುಟುಂಬದಲ್ಲಿ ಮಹಿಳೆಯರ ಮೇಲೆ ನಡೆಯುವ ಹಿಂಸಾಚಾರ, ಹೆಣ್ಣು ಮಗುವಿನ ಹತ್ಯೆ, ಅತ್ಯಾಚಾರ, ಕುಡಿತ, ಹೆಂಡತಿಯನ್ನು ಹೊಡೆಯುವುದು, ವರದಕ್ಷಿಣೆ ಸಾವು ಮತ್ತು ಆಮ್ನಿಯೋಸಿಂಥಿಸಿಸ್‌ಗಳು ಹೆಚ್ಚುತ್ತಿವೆ.

ಕುಟುಂಬ ವ್ಯವಸ್ಥೆಯಲ್ಲಿ ಬದಲಾಗದೆ ಇರುವ ಒಂದು ಮುಖ್ಯ ಲಕ್ಷಣವೆಂದರೆ ಲಿಂಗಾಧಾರಿತ ಶ್ರಮ ವಿಭಜನೆ. ಮನೆಯ ಕೆಲವು ಕೆಲಸಗಳನ್ನು ಹೆಂಗಸರೆ ಮಾಡಬೇಕು, ಗಂಡಸರು ಮಾಡಬಾರದು, ಇನ್ನೂ ಕೆಲವು ಕೆಲಸಗಳನ್ನು ಗಂಡಸರು ಮಾತ್ರ ಮಾಡಬೇಕು ಅನ್ನುವ ಪದ್ಧತಿ ಇನ್ನೂ ಮುಂದುವರೆದುಕೊಂಡು ಹೋಗುತ್ತಿದೆ.

ಶೈಕ್ಷಣಿಕ ಕ್ಷೇತ್ರದಲ್ಲಿ, ನಮ್ಮ ಸಂವಿಧಾನವು ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡಿದ್ದರೂ, ಸರ್ಕಾರ ೧೪ ವರ್ಷ ವಯಸ್ಸಿನವರಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಅನುಸರಿಸುತ್ತಿದ್ದರೂ, ಶೇಕಡ ೬೦ರಷ್ಟು ಮಹಿಳೆಯರ ಅನಕ್ಷರಸ್ತರಾಗಿದ್ದಾರೆ. ಶಾಲೆಗಳಲ್ಲಿ ಹುಡುಗಿಯರ ಡ್ರಾಪ್ ಔಟು ಹುಡುಗರಿಗಿಂತ ಜಾಸ್ತಿಯಾಗಿರುತ್ತದೆ. ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶಾಲೆಯಿಲ್ಲದಿರುವುದರಿಂದ, ಮನೆಯಲ್ಲಿ ಸಣ್ಣ ಮಕ್ಕಳನ್ನು ನೋಡಿಕೊಳ್ಳಲೆಂದು, ವಿದ್ಯಾಭ್ಯಾಸದ ಖರ್ಚನ್ನು ಭರಿಸಲಾಗದೆ, ಹೆಣ್ಣು ಮಕ್ಕಳಿಗ್ಯಾಕೆ ವಿದ್ಯೆ ಎಂಬ ತಂದೆ ತಾಯಿಗಳ ಉದಾಸೀನತೆಯಿಂದ, ಶಾಲೆ ದೂರ ಎಂದೊ ಅನೇಕ ಕಾರಣಗಳಿಂದ ಹೆಣ್ಣು ಮಕ್ಕಳ ಶಿಕ್ಷಣ ಪ್ರಾರಂಭವಾಗುವುದೆ ಇಲ್ಲ. ಒಂದು ವೇಳೆ ಪ್ರಾರಂಭವಾದರು ಅರ್ಧದಲ್ಲೆ ನಿಂತು ಹೋಗುತ್ತದೆ. ಹುಡುಗಿಯರ ಡ್ರಾಪ್ ಔಟ್ ಪ್ರಾಥಮಿಕ ಹಂತದಲ್ಲಿ ಶೇಕಡ ೫೫.೫ ಇದ್ದರೆ ಮಾಧ್ಯಮಿಕ ಹಂತದಲ್ಲಿ ಶೇಕಡ ೭೭.೭ ಇಡೆ. ಉನ್ನತ ಶಿಕ್ಷಣದಲ್ಲೂ ಹುಡುಗಿಯರ ಪ್ರಮಾಣ ತುಂಬ ಕಡಿಮೆಯಿದೆ. ಈಚೆಗೆ ಪ್ರಾಥಮಿಕ ಹಂತದಲ್ಲಿ ಹುಡುಗಿಯರ ದಾಖಲಾತಿ ಹೆಚ್ಚುತ್ತಿದ್ದರು ಅದು ಹುಡುಗರಿಗಿಂತ ಕಡಿಮೆಯಿದೆ. ಪುರುಷರ ಸಾಕ್ಷರತೆ ಶೇ. ೬೩.೮೬ಯಿದ್ದರೆ ಮಹಿಳೆಯರದು ಶೇ. ೩೯.೪೨ ಇದೆ.

ಈ ಅನಕ್ಷರತೆಯು ಮಹಿಳೆಯರ ಅಭಿವೃದ್ಧಿಗೆ ಒಂದು ದೊಡ್ಡ ಅಡ್ಡಿಯಾಗಿದೆ. ಇದರಿಂದ ಅವರು ಉದ್ಯೋಗ ಪಡೆಯುವುದಕ್ಕಾಗಲಿ, ತಮ್ಮ ಹಕ್ಕುಗಳು ಯಾವುವು ಮತ್ತು ಅವುಗಳನ್ನು ಚಲಾಯಿಸುವುದಕ್ಕಾಗಲಿ, ಸರ್ಕಾರದ ಹಣಕಾಸಿನ ಮತ್ತು ಆರೋಗ್ಯದ ಸೌಲಭ್ಯಗಳನ್ನು ಪಡೆಯುವುದಕ್ಕಾಗಲಿ ಸಾಧ್ಯವಾಗುತ್ತಿಲ್ಲ. ಅದರಲ್ಲೂ ಗ್ರಾಮೀಣ ಮಹಿಳೆಯರು ಅನಕ್ಷರತೆಯಿಂದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ರಾಜ್ಯಗಳ ನಡುವಿನ ಮಹಿಳಾ ಸಾಕ್ಷರತೆಯ ಅಂತರ ಅಗಾಧವಾಗಿದೆ. ಕೇರಳದಲ್ಲಿ ಅತ್ಯಂತ ಹೆಚ್ಚಿನ ಸಾಕ್ಷರತೆ ೮೬.೧೭% ಇದ್ದರೆ, ರಾಜಸ್ಥಾನದಲ್ಲಿ ಅತ್ಯಂತ ಕಡಿಮೆ ಸಾಕ್ಷರತೆ ೨೦.೪೪% ಇದೆ. ಎಲ್ಲಿ ಸಾಕ್ಷರತೆ ಉತ್ತಮವಾಗಿದೆಯೋ ಅಲ್ಲಿ ಮಹಿಳೆಯರ ಸ್ಥಾನಮಾನ ಕೂಡ ಉತ್ತಮವಾಗಿರುವುದು ಕಂಡುಬರುತ್ತದೆ.

ಆರ್ಥಿಕ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರವನ್ನು ನೋಡಿದಾಗ ಕೆಲವು ಮುಖ್ಯ ಅಂಶಗಳನ್ನು ಗಮನಿಸಬಹುದು. ಮಹಿಳೆಯರ ಮುಕ್ಕಾಲು ಪಾಲು ಶ್ರಮ ಮತ್ತು ಸಮಯ ಮನೆಕೆಲಸ, ಸೌದೆ, ನೀರು ಮತ್ತು ಹುಲ್ಲು ತರುವ ಕೆಲಸಗಳಿಗೆ ವ್ಯಯವಾಗಿರುತ್ತದೆ. ಆದರೆ ಈ ಎಲ್ಲಾ ಕೆಲಸಗಳು ಅಗೋಚರವಾದವುಗಳು. ಕೆಲಸಗಳಿಗೆ ವೇತನವಿಲ್ಲದಿರುವುದರಿಂದ ಉತ್ಪಾದನಾ ಮೌಲ್ಯವಿರುವುದಿಲ್ಲ. ಈ ಕೆಲಸಗಳನ್ನು ಮಾಡುವವರನ್ನು 'ಮನೆಯೊಡತಿಯರು' ಎನ್ನುತ್ತಾರೆ ಹೊರತು ಉದ್ಯೋಗಸ್ತರು ಎಂದು ಪರಿಗಣಿಸುವುದಿಲ್ಲ.

ಹೊರಗೆ ದುಡಿಯುವ ಮಹಿಳೆಯರನ್ನು ತೆಗೆದುಕೊಂಡರೆ ಹೆಚ್ಚಿನ ಮಹಿಳೆಯರು ಅಸಂಘಟಿತ ಮತ್ತು ಕೌಶಲ್ಯವಿಲ್ಲದ

ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. ಒಟ್ಟು ಕೆಲಸಗಾರರ ಸಂಖ್ಯೆಯಲ್ಲಿ ಅವರ ಪ್ರಮಾಣ ತುಂಬ ಕಡಿಮೆಯಿದೆ. ೧೯೯೧ರ ಜನಗಣತಿ ಪ್ರಕಾರ ಅದು ಶೇ. ೨೨.೬೯ ಇದೆ. ಶೇ. ೯೪ರಷ್ಟು ಮಹಿಳೆಯರು ಅಸಂಘಟಿತ ಕ್ಷೇತ್ರದಲ್ಲಿದ್ದರೆ, ಕೇವಲ ಶೆ. ೬ರಷ್ಟು ಮಹಿಳೆಯರು ಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಅಲ್ಲದೆ ಹೊಸ ಆರ್ಥಿಕ ನೀತಿ ಮತ್ತು ತಂತ್ರಜ್ಞಾನ ಬೆಳವಣಿಗೆ, ಮಹಿಳೆಯರು ಕೆಲಸ ಬಿಟ್ಟು ಮನೆಗೆ ಹೋಗುವಂತೆ ಅಥವಾ ಕೆಳಮಟ್ಟದ ಕಡಿಮೆ ವೇತನದ ಕೆಲಸಗಳಲ್ಲಿ ತೊಡಗುವಂತೆ ಮಾಡುತ್ತಿವೆ.

ಇತ್ತೀಚಿನ ವರ್ಷಗಳಲ್ಲಿ ಹೊರಗೆ ದುಡಿಯುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ ನಿಜ. ಆದರೆ ತುಂಬ ಕಡಿಮೆ ದರದಲ್ಲಿ ಹೆಚ್ಚಾಗುತ್ತಿದೆ ಮತ್ತು ಅದು ಪುರುಷರಿಗಿಂತ ಕಡಿಮೆಯಿದೆ. ನಗರ ಪ್ರದೇಶಗಳಲ್ಲಿ ಮಾತ್ರ ಮಹಿಳಾ ಕೆಲಸಗಾರರ ಸಂಖ್ಯೆಯಲ್ಲಿ ಸ್ವಲ್ಪ ಹೆಚ್ಚಳ ಕಂಡುಬಂದಿದೆ. ಅದು ಪ್ರತಿ ವರ್ಷ ಶೇ. ೬.೧ರಷ್ಟು ಹೆಚ್ಚುತ್ತಿದೆ. ಆದರೆ ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಮಹಿಳಾ ಕೆಲಸಗಾರರ ಪ್ರಮಾಣ ಹೆಚ್ಚುತ್ತಿರುವುದು ಆಧುನಿಕ ಉತ್ತಮ ವೇತನ, ತಂತ್ರಜ್ಞಾನವಿರುವಂತ ಉದ್ಯೋಗಗಳಲ್ಲಿ, ಕಡಿಮೆ ವೇತನ ಸಿಗುವ, ಪಾರಂಪರಿಕ, ಕೌಶಲ್ಯವಿಲ್ಲದಿರುವ ಉದ್ಯೋಗಗಳಲ್ಲಿ ಮಾತ್ರ ಅವರ ಪ್ರಮಾಣ ಹೆಚ್ಚುತ್ತಿದೆ. ಮಾಲೀಕರುಗಳು ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ, ಕೆಲವು ಕೆಲಸಗಳಿಗೆ ಕಡಿಮೆ ವೇತನಕ್ಕೆ ಒಪ್ಪಿಕೊಳ್ಳುವ ಮಹಿಳೆಯರನ್ನೇ ಹೆಚ್ಚಾಗಿ ನೇಮಿಸಿಕೊಳ್ಳುತ್ತಾರೆ. ಕನಿಷ್ಠ ವೇತನ ಕಾಯಿದೆಯಿದ್ದರು, ಸಮನಾಗಿ ದುಡಿದರೂ ಮಹಿಳೆಯರು ಪುರುಷರಿಗಿಂತ ಕಡಿಮೆ ವೇತನ ಪಡೆಯುತ್ತಿದ್ದಾರೆ. ಅದರಲ್ಲೂ ಕೃಷಿ ಕಾರ್ಮಿಕ ಮಹಿಳೆಯರು ಮತ್ತು ಕಟ್ಟಡ ಕಟ್ಟುವಲ್ಲಿ ಕೆಲಸ ಮಾಡುವ ಮಹಿಳೆಯರು ಪುರುಷರ ಅರ್ಧದಷ್ಟು ವೇತನವನ್ನು ಪಡೆಯುತ್ತಿದ್ದಾರೆ.

ಇದರ ಜೊತೆಗೆ ದುಡಿಯುವ ಮಹಿಳೆಯರಿಗೆ ಸಮಾಜದ ಕುಟುಂಬದ ಬೆಂಬಲ ಸಾಕಷ್ಟಿರುವುದಿಲ್ಲ. ಮನೆಕೆಲಸವನ್ನು ಮಾಡಿಕೊಂಡು ಉತ್ಪಾದನಾ ಮತ್ತು ಪುನರುತ್ಪಾದನ ಚಟುವಟಿಕೆ ಹೀಗೆ ಮೂರು ರೀತಿಯ ಕೆಲಸಗಳ ಹೊರೆಯನ್ನು ಹೊರಬೇಕಾಗಿದೆ.

ಭಾರತದ ಮಹಿಳೆಯರ ಆರೋಗ್ಯ ಮತ್ತು ಪೌಷ್ಠಿಕತೆಯನ್ನು ತೆಗೆದುಕೊಂಡರೆ ಅಲ್ಲೂ ನಮಗೆ ಸಮಾಧಾನಕರ ಅಂಶ ಕಂಡುಬರುವುದಿಲ್ಲ. ಆರೋಗ್ಯಕ್ಕೆ ಸಂಬಂಧಪಟ್ಟಂತೆ ಅವರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ - ಹೆಚ್ಚುತ್ತಿರುವ ತಾಯಿ ಹಾಗು ಶಿಶು ಮರಣದ ದರ, ತಾಯಂದಿರ ಅನಾರೋಗ್ಯ, ಕಡಿಮೆ ನಿರೀಕ್ಷಣ ಜೀವಿತಾವದಿ, ಅಪೌಷ್ಠಿಕತೆ, ಮಾನಸಿಕ ಅಸ್ವಸ್ಥತೆ, ಏರುತ್ತಿರುವ ಆತ್ಮಹತ್ಯೆ ಪ್ರಮಾಣ, ಅನಿಮಿಯ ಮತ್ತು ಇತರ ಕಾಯಿಲೆಗಳಿಂದ ನರಳುತ್ತಿದ್ದಾರೆ. ಇನ್ನು ಸಮಾಜದ ಸಾಮಾಜಿಕ ಸಾಂಸ್ಕೃತಿಕ ಕಟ್ಟುಪಾಡುಗಳು ಉದಾ : ವಿವಾಹದ ಬಗ್ಗೆ ಇರುವ ಮನೋಭಾವ, ವಿವಾಹದ ವಯಸ್ಸು, ತಾಯಿತನ ಹಾಗು ಗಂಡು ಮಗುವಿನ ಬಗ್ಗೆ ಇರುವ ವ್ಯಾಮೋಹ, ಪ್ರಾಮುಖ್ಯತೆ, ಕುಟುಂಬದ ರಚನೆ, ಆದರ್ಶ ಸತಿ ಮುಂತಾದವುಗಳು ಮಹಿಳೆಯರ ಆರೋಗ್ಯದ ಮೇಲೆ ಪ್ರಭಾವ ಬೀರುತ್ತವೆ. ಇವುಗಳು ಕುಟುಂಬದಲ್ಲಿನ ಅವರ ಸ್ಥಾನ, ವಿದ್ಯಾಭ್ಯಾಸ, ಆರೋಗ್ಯದ ಮೇಲೆ ಪ್ರಭಾವ ಬೀರುತ್ತದೆ. ಇವುಗಳು ಕುಟುಂಬದಲ್ಲಿನ ಅವರ ಸ್ಥಾನ, ವಿದ್ಯಾಭ್ಯಾಸ, ಆರೋಗ್ಯದ ಮಟ್ಟ ಪೌಷ್ಠಿಕತೆ, ಔಷಧೋಪಚಾರಗಳನ್ನು ನಿರ್ಧರಿಸುತ್ತದೆ.

ದಶಕದಿಂದ ದಶಕಕ್ಕೆ ಇಳಿಮುಖವಾಗುತ್ತಿರುವ ಸೆಕ್ಸ್‌ರೇಶಿಯೋ ಕೂಡ ಮಹಿಳೆಯರ ಆರೋಗ್ಯ ಮಟ್ಟವನ್ನು ಸೂಚಿಸುತ್ತದೆ. ೧೯೨೧ರಲ್ಲಿ ೧೦೦೦ ಪುರುಷರಿಗೆ ೯೫೫ ಮಹಿಳೆಯರಿದ್ದರೆ, ೧೯೯೧ ಹೊತ್ತಿಗೆ ೧೦೦೦ : ೯೨೯ಕ್ಕೆ ಇಳಿಯಿತು. ಕೆಲವು ರಾಜ್ಯಗಳಲ್ಲಿ ಉದಾ : ಅರುಣಾಚಲ ಪ್ರದೇಶ, ಹರ್ಯಾಣ, ರಾಜಾಸ್ಥಾನಗಳಲ್ಲಿ ಅದು ಇನ್ನೂ ಕಡಿಮೆಯಿದೆ. ಇದಕ್ಕೆ ಮುಖ್ಯ ಕಾರಣ, ಮಹಿಳೆಯರ ಕುರಿತು ಇರುವ ಸಾಮಾಜಿಕ ಸಾಂಸ್ಕೃತಿಕ ಮನೋಭಾವ, ಹೆಣ್ಣು ಮಗುವಿನ ಬಗ್ಗೆ ಇರುವ ಉದಾಸೀನ, ತಿರಸ್ಕಾರ, ಆಮ್ನಿಯೋಸಿಂಥಿಸಿಸ್, ಮಹಿಳೆಯರ ಆರೋಗ್ಯದ ಬಗ್ಗೆ ಕುಟುಂಬ ಮತ್ತು ಸರ್ಕಾರದ ಉದಾಸೀನ ಧೋರಣೆ, ಅನಕ್ಷರತೆ, ಚಿಕ್ಕ ವಯಸ್ಸಿನಲ್ಲಿ ಮದುವೆ, ತಾಯಿತನ ಮುಂತಾದವುಗಳು ಮಹಿಳೆಯರ ಸಂಖ್ಯೆಯನ್ನು ಕಡಿಮೆ ಮಾಡುತ್ತಿವೆ.

ಒಟ್ಟು ಮಹಿಳೆಯರ ಸಾವಿನಲ್ಲಿ ಶೇ. ೧೫ರಷ್ಟು ಸಾವು ೧೫ರಿಂದ ೪೪ ವರ್ಷ ವಯಸ್ಸಿನ ಮಹಿಳೆಯರಲ್ಲಿ ಉಂಟಾಗುತ್ತದೆ. ಪ್ರತಿ ವರ್ಷ ಸುಮಾರು ೧,೨೦,೦೦೦ ತಾಯಂದಿರು ಸಾವಿಗೀಡಾಗುತ್ತಿದ್ದಾರೆ. ಬಡ ಕುಟುಂಬಗಳಲ್ಲಿ ಮಹಿಳೆಯರು ತುಂಬ ಕಡಿಮೆ ಆಹಾರವನ್ನು ತೆಗೆದುಕೊಳ್ಳುತ್ತಾರೆ. ಸುಮಾರು ೫೦೦-೬೦೦ ಕ್ಯಾಲೊರಿ ಕಡಿಮೆ ಆಹಾರ ತೆಗೆದುಕೊಳ್ಳುತ್ತಾರೆ. ಗರ್ಭಿಣಿ ಮತ್ತು ಹಾಲು ಕುಡಿಸುವ ಮಹಿಳೆಯರಲ್ಲಿ ೧೧೦೦-೧೦೦೦ ಕ್ಯಾಲೊರಿ ಕಡಿಮೆ ಆಹಾರ ತೆಗೆದುಕೊಳ್ಳುತ್ತಾರೆ. ಅನಿಮಿಯ, ಗರ್ಭಪಾತ, ಹ್ಯಾಮರೇಜ್, ಟಾಕ್ಸೀಮಿಯ, ಸೆಪ್ಸಿಸ್, ಮುಂತಾದ ಕಾಯಿಲೆಗಳಿಂದ ಸಾವಿಗೀಡಾಗುತ್ತಾರೆ. ಶೇ. ೭೦ರಷ್ಟು ಸಾವುಗಳನ್ನು ತಡೆಯಬಹುದಾಗಿದೆ. ಶೇ. ೫೦ರಷ್ಟು ಮಹಿಳೆಯರು

ಅನಿಮಿಯದಿಂದ ಬಳಲುತ್ತಿದ್ದು, ಒಟ್ಟು ತಾಯಂದಿರ ಸಾವಿನಲ್ಲಿ ಶೇ. ೧೫-೨೦ ಸಾವುಗಳು ಅನಿಮಿಯದಿಂದ ಆಗುತ್ತಿವೆ.

ಇತ್ತೀಚೆಗೆ ಮಹಿಳೆಯರ ಲೈಫ್ ಎಕ್ಸ್‌ಪೆಕ್ಟೆನ್ಸಿ ಸುಧಾರಿಸುತ್ತಿದ್ದರೂ, ಅವರ ಆರೋಗ್ಯ ಮತ್ತು ಪೌಷ್ಠಿಕತೆ ಇನ್ನೂ ಸಾಕಷ್ಟು ಸುಧಾರಿಸಬೇಕಾಗಿದೆ.

ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆ ಕಡಿಮೆಯಾಗುತ್ತಿದೆ. ಕೇಂದ್ರ ಮತ್ತು ರಾಜ್ಯಗಳೆರಡಲ್ಲೂ ಮಂತ್ರಿ ಪದವಿಗಳಲ್ಲಿ ಕೆಲವೆ ಮಂದಿ ಮಹಿಳೆಯರಿದ್ದಾರೆ. ಸದ್ಯದ ಲೋಕಸಭೆಯಲ್ಲಿ ೩೯ ಮಂದಿ ಮಹಿಳೆಯರಿದ್ದಾರೆ. ಕರ್ನಾಟಕದ ವಿಧಾನ ಸಭೆಯಲ್ಲಿ ೧೯೫೭ರಲ್ಲಿ ೮% ಇದ್ದಿದ್ದು ೧೯೯೧ರಲ್ಲಿ ೩.೫% ಗೆ ಇಳಿಯಿತು. ರಾಜಕೀಯವು ಪುರುಷರ ಕ್ಷೇತ್ರವೆನಿಸಿ ಮಹಿಳೆಯರಿಗೆ ನಿಷೇಧಿತ ಕ್ಷೇತ್ರವೆನಿಸಿದೆ. ಆದರೆ ಇತ್ತೀಚೆಗೆ ಪಂಚಾಯತ್ ರಾಜ್‌ನಲ್ಲಿ ಶೇ. ೩೦ರಷ್ಟು ಮೀಸಲಾತಿ ನೀಡಿರುವುದರಿಂದ, ಗ್ರಾಮೀಣ ಮಟ್ಟದಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಉತ್ತಮಗೊಳ್ಳುವುದರ ಬಗ್ಗೆ ಸ್ವಲ್ಪ ಭರವಸೆ ಹುಟ್ಟಿಸಿದೆ.

ಮಹಿಳೆಯರ ಸ್ಥಾನಮಾನವನ್ನು ಸೂಚಿಸುವ ಮತ್ತೊಂದು ಮುಖ್ಯ ಅಂಶವೆಂದರೆ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ, ಇತ್ತೀಚೆಗೆ ಅದು ಹೆಚ್ಚುತ್ತಿರುವುದು ಒಂದು ವಿಷಾದಕರ ಸಂಗತಿ. ಮಹಿಳೆಯರ ಮೇಲೆ ಪ್ರತಿ ಏಳು ನಿಮಿಷಕ್ಕೆ ಒಂದರಂತೆ ಒಂದಲ್ಲಾ ಒಂದು ರೀತಿಯ ದೌರ್ಜನ್ಯ ನಡೆಯುತ್ತಿದೆ ಎಂದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ವರದಿ ತಿಳಿಯುತ್ತದೆ.

೧೯೯೨ರ ಜನವರಿಯಿಂದ ಏಪ್ರಿಲ್ ತಿಂಗಳೊಳಗೆ, ಅತ್ಯಾಚಾರ, ವರದಕ್ಷಿಣೆ ಸಾವು, ಅಪಹರಣ ಮುಂತಾದ ಸುಮಾರು ೬೩೩೭ ಅಪರಾಧಗಳು ನಡೆದಿರುವ ಬಗ್ಗೆ ಕೇಸ್ ದಾಖಲಾಗಿರುವುದು ಕಂಡುಬಂದಿದೆ. ವರದಕ್ಷಿಣೆ ಸಾವುಗಳು ೧೯೮೭ರಲ್ಲಿ ೧೯೧೨ ಆಗಿದ್ದರೆ ೧೯೯೧ರಲ್ಲಿ ೫೧೫೭ ಸಾವುಗಳು ಆಗಿವೆ. ಕುಟುಂಬದಲ್ಲಿನ ಹಿಂಸೆ, ಹೆಂಡತಿಯನ್ನು ಹೊಡೆಯುವುದು, ಪೋಲೀಸ್ ಇಲಾಖೆ ಮತ್ತು ಕೆಲಸ ಮಾಡುವ ಕಡೆ ಅತ್ಯಾಚಾರ, ಹೆಣ್ಣು ಮಕ್ಕಳನ್ನು ಚೇಡಿಸುವುದು, ಅಪಹರಿಸುವುದು, ವೇಶ್ಯಾವಾಟಿಕೆಗೆ ಮಾರಾಟ ಮಾಡುವುದು ಹೆಚ್ಚಾಗುತ್ತಿದೆ. ಕಾನೂನಿನಲ್ಲಿನ ಲೋಪದೋಷಗಳು, ವಕೀಲರು ಮತ್ತು ಪೋಲೀಸರ ಉದಾಸೀನ ಧೋರಣೆ, ಪುರುಷ ಪ್ರಧಾನ ಮನೋಭಾವ, ಜನರಲ್ಲಿ ಕಾನೂನಿನ ಅರಿವಿಲ್ಲದಿರುವುದು, ಅದರಲ್ಲೂ ಮಹಿಳೆಯರಿಗೆ ತಮ್ಮ ಹಕ್ಕುಗಳ ಬಗ್ಗೆ, ಕಾನೂನಿನ ರಕ್ಷಣೆ ಬಗ್ಗೆ ಅರಿವಿಲ್ಲದೆಯಿರುವುದರಿಂದ ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚಾಗುತ್ತಿದೆ.

ಒಟ್ಟಿನಲ್ಲಿ ಮಹಿಳೆಯರ ಸ್ಥಾನಮಾನದಲ್ಲಿ ಹೆಚ್ಚು ನಕಾರಾತ್ಮಕ ಅಂಶಗಳು ಕಂಡುಬಂದರೂ ಇತ್ತೀಚೆಗೆ ಸ್ವಲ್ಪ ಸುಧಾರಣೆ ಕಂಡುಬರುತ್ತಿದೆ. ಆದರೆ ಇನ್ನೂ ಸಾಕಷ್ಟು ಸುಧಾರಿಸಬೇಕಾಗಿದೆ.

ಹೇಮಲತ ಎಚ್. ಎಮ್.
ಮೈಸೂರು

References : The States of Woman in India - by Dr. Abha Chanhan
The States of Women - ICSSR Report
In Search of Answers - Ed : Ruthi Vanitsa, Madu Kishwan.

(೯ನೇ ಪುಟದಿಂದ ಮುಂದುವರಿದಿದ)

ಪ್ರತಿಭಟಿಸಬೇಕು ಎನ್ನುವ ಆಕೆ ಸಾಹಿತಿಗೆ ಸಾಮಾಜಿಕ ಬದ್ಧತೆ ಇರಬೇಕು ಎಂದು ಒತ್ತಿ ಹೇಳುತ್ತಾರೆ.

ನೊಂದ ಜನರೊಂದಿಗೆ ಬದುಕುತ್ತಾ, ಅವರ ಹೋರಾಟದ ಭಾಗವಾಗಿರುವ ಮಹಾಶ್ವೇತದೇವಿಯವರು, ತಮ್ಮ ಸಾಹಿತ್ಯದಲ್ಲೂ ಅವರ ಬದುಕನ್ನೆ ಚಿತ್ರಿಸಿದ್ದಾರೆ. ಆ ಜನರ ದನಿಯಾಗಿದೆ ಅವರ ಸಾಹಿತ್ಯ. ಬುಡಕಟ್ಟು ಜನರ ಬದುಕನ್ನು ಸರಳವಾಗಿ, ಮನಮುಟ್ಟುವಂತೆ, ಆಕೆ ಬರೆಯುತ್ತಾರೆ. ದಿನನಿತ್ಯದ ಬದುಕಿನಲ್ಲೆ ಜೀವನದ ಸತ್ವವನ್ನು ಹುಡುಕುವ, ಅದನ್ನು ದಕ್ಕಿಸಿಕೊಳ್ಳಲು ಪ್ರಯತ್ನಿಸುವ ಆಕೆ ಆರಾಮ ಕುರ್ಚಿ ಚಿಂತಕಿಯಲ್ಲ! ಬದುಕಿದ್ದನ್ನು ಯಾವ ಸೋಗು ಇಲ್ಲದೇ ತೀವ್ರವಾಗಿ, ಮನಮುಟ್ಟುವಂತೆ ಹೇಳುವುದೇ ಆಕೆಯ ವಿಶಿಷ್ಟತೆ, ಆಕೆಯ ಸಾಹಿತ್ಯ ಜನರೊಂದಿಗೆ ಬೆರೆತು ಅವರ ನಿತ್ಯ ಜೀವನದ ಜಂಜಾಟ, ಖುಷಿ ನೋವುಗಳಲ್ಲಿ ಬಂದಂತಹದು. ಆಕೆಯಂತೆಯೆ ಆಕೆಯ ಸಾಹಿತ್ಯ ಜೀವಂತ!

(ಆಧಾರ : ಮಹಾಶ್ವೇತದೇವಿಯವರು ಅಮೆರಿಕದಲ್ಲಿ ಬುಡಕಟ್ಟು ಅಧ್ಯಯನವನ್ನು ಕುರಿತು ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ನೀಡಿದ ಸಂದರ್ಶನ.)

●

REGD NO. KRNA 271

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067